
# ಅಪರಂಜಿ

ತಿಳಿನಗೆಯ ಕಾರಂಜಿ



ಸೆಪ್ಟೆಂಬರ್ - 2011






ಬಿಡಿ ಪ್ರತಿ: ರೂ. 10.00

# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 28
ಸಂಚಿಕೆ - 12
ಸೆಪ್ಟೆಂಬರ್ - 2011

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 4 |
| ಅಪಶಕುನ ಪಿಶಾಚಿ! | **ಇ.ಆರ್. ರಾಮಚಂದ್ರನ್** | 8 |
| ಸ್ವಾಮಿ ಪ್ರೇಮದೇವರ.... | **ಬಿ.ಕೆ. ಗಣೇಶ್** | 11 |
| ಈಮೇಲ್ ಫಾರವರ್ಡ್.... | | 13 |
| ಭೂಗೋಳ.... | **ಚಂದ್ರಶೇಖರ್ ಬಾಲಚಂದ್ರನ್** | 15 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 18 |
| ಮಾಸ ಭವಿಷ್ಯ | **ಸತ್ಯೋತ್ತಮಾಚಾರ್ಯ** | 20 |
| ಭೀಮನ ಅಮಾಸೆ..... | **ನಾಗೇಶ ಹೆಗಡೆ** | 23 |
| ತುಂತುರು | **ದಂನಾಳ** | 27 |
| ಬೋಂಡಾ ಮೆಷೀನು... | **ಗುರು** | 28 |
| ಅತಿಥಿ ದೇವ್ರೋ ಭವ | **ವಾಣೀ ಸುರೇಶ್** | 34 |
| ಬೆಂಕೀ ದೇವ್ರು ಮುಂದ್.. | **ಎಚ್.ಬಿ. ಮಂಜುನಾಥ** | 39 |

**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**

*ಮುದ್ರಣ :* ರವಿ ಗ್ರಾಫಿಕ್ಸ್ - *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: beluruamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಮಾಜೀ ಮುಖ್ಯಮಂತ್ರಿಗಳು ಈಗ ಏನು ಮಾಡುತ್ತಾರಂತೆ?

**● ನಿದ್ದೆ !!**

★★★

ಬಹುಕಾಲದ ಹಿಂದೆ ಎರಡು ಚಂದ್ರಗಳಿದ್ದುವಂತೆ – ಸುದ್ದಿ

**● ಹಿಂದಿ ಚಲನಚಿತ್ರಕಾರರು ಬೆಚ್ಚಿಬಿದ್ದರಂತೆ !!**

★★★

ನಾನಿನ್ನು ಸಾಮಾನ್ಯ ಕಾರ್ಯಕರ್ತ – ಬಿ.ಎಸ್.ವೈ.

**● ''ಅಸಾಧಾರಣ'' ಪರ್ವ ಮುಗಿಯಿತು !!**

★★★

ಸಾಹಿತ್ಯದಿಂದ ಮಾತ್ರ ಹಲವು ಜನ್ಮಗಳ ಅನುಭವ – ಹೇಳಿಕೆ

**● ನಮಗೂ ಹಾಗೇ ಅನ್ನಿಸುತ್ತೆ !!**

★★★

ಅಮೆರಿಕದ ಆರ್ಥಿಕ ಬಿಕ್ಕಟ್ಟು : ಜಗತ್ತಿನಾದ್ಯಂತ ಆತಂಕ – ಪತ್ರಿಕೆ

**● ಹಿರಿಯಣ್ಣನ ಚಾಳಿ..... !!**

★★★

ಬಹರೇನ್ : ವಿಶ್ವ ಕನ್ನಡ ಸಮ್ಮೇಳನ – ಸುದ್ದಿ

**● ಜನ ಬಹರೇನು? ಅಂತ ಕಾರ್ಯಕರ್ತರು ಚಿಂತಿಸುತ್ತಿದ್ದಾರಂತೆ !!**

★★★

# ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿರುವ

# ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆ 2011

**ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.**

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 3 ರಿಂದ 4 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ (ರೂ.750/-) ಹಾಗೂ ಮೂರನೇ (ರೂ.500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ. ಬಡಾವಣೆ 1ನೇ ಹಂತ, ಬೆಂಗಳೂರು - 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2011.

# ನಮ್ಮ ನಿಮ್ಮಲ್ಲಿ

''ಇಂಗ್ಲೆಂಡಿನಲ್ಲಿ ಅಷ್ಟೆಲ್ಲಾ ಗಲಭೆ, ಗಲಾಟೆ ಆಗ್ತಾ ಇದೆಯಲ್ಲಾ, ಇದಕ್ಕೆ ಕಾರಣವಾದರೂ ಏನಿರಬಹುದು? ನೀವಿಬ್ಬರೂ ಆ ದೇಶದಲ್ಲಿ ಬಹುಕಾಲ ಇದ್ದೋರಲ್ಲವೇ'' ಅಂತ ನಾನು ಜಯಂತ್‌ರನ್ನು ಪ್ರಶ್ನಿಸಿದೆ. ಜಯಂತ್ ಹಾಗೂ ಅವರ ಪತ್ನಿ ಮಂಗಳಾ ಅವರನ್ನು ನಾನು ನಮ್ಮ ಕುಪ್ಪಂ ಕ್ಯಾಂಪಸ್ ತೋರಿಸಲು ಕರೆದುಕೊಂಡು ಹೋಗಿದ್ದೆ. ಕುಪ್ಪಂ ಕ್ಯಾಂಪಸ್ ಅಂದರೆ ಹಳ್ಳಿಗಳಲ್ಲಿನ ಶಾಲಾ ಮಕ್ಕಳಿಗೆ ವಿಜ್ಞಾನ ಪಾಠ ಕಲಿಸುವುದಕ್ಕೆ ಅಂತ ಹಲವರು ಸೇರಿ ನಿರ್ಮಿಸಿರುವ ಒಂದು ವಿಜ್ಞಾನ ಕೇಂದ್ರ. ದಿನವೆಲ್ಲಾ ಕ್ಯಾಂಪಸ್ಸಿನಲ್ಲಿ ಓಡಾಡಿ ತೋರಿಸಬಹುದಾದದ್ದನೆಲ್ಲಾ ತೋರಿಸಿ, ಸಂಜೆಗೆ ನಮ್ಮ ಅತಿಥಿಗೃಹದ ಕಾರಿಡಾರಿನಲ್ಲಿದ್ದ ಬೆತ್ತದ ಕುರ್ಚಿಗಳ ಮೇಲೆ ನಾವೆಲ್ಲಾ ಕುಳಿತಿದ್ದೆವು. ನಾವೆಲ್ಲಾ ಅಂದರೆ ನಮ್ಮ ಅತಿಥಿ ದಂಪತಿಗಳೇ ಅಲ್ಲದೆ, ನ್ಯೂಯಾರ್ಕಿನ ಶಾಲೆಯೊಂದರಿಂದ ಬಂದಿದ್ದ ಹೊವಾರ್ಡ್ ಎಂಬ ಶಿಕ್ಷಕ, ಹಾಗೂ ಧಾರವಾಡದ ಪ್ರತಿಭಾವಂತ ಶಿಕ್ಷಕ ದಾನಪ್ಪ ಬಳೂರಗಿ ಇವರುಗಳೂ ನಮ್ಮೊಂದಿಗೆ ಹರಟೆಗೆ ಕುಳಿತಿದ್ದರು. ಅಂದಹಾಗೆ ಜಯಂತ್ ಅಂದರೆ ಜಯಂತ್ ವಿಷ್ಣು ನಾರ್ಲೀಕರ್. ಅರವತ್ತರ ದಶಕದಲ್ಲಿ ಇಂಗ್ಲಿಷ್ ವಿಜ್ಞಾನಿ ಫ್ರೆಡ್ ಹಾಯ್ಲ್ ಅವರ ಸಹಯೋಗದೊಂದಿಗೆ ವಿಶ್ವ ಸೃಷ್ಟಿಯ ಬಗ್ಗೆ ಒಂದು ಹೊಸ ವಾದವನ್ನು ಮಂಡಿಸಿ ಜಗತ್ತಿನಾದ್ಯಂತ ಮನ್ನಣೆಯನ್ನು ಗಳಿಸಿದ ಖಭೌತ ವಿಜ್ಞಾನಿ. ಇವರ ಪತ್ನಿ ಮಂಗಳಾ ಸಹಾ ಗಣಿತಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದು ಪುಣೆಯಲ್ಲಿ ಪ್ರಾಧ್ಯಾಪಕಿ ಆಗಿದ್ದಾರೆ.

ನನ್ನ ಪ್ರಶ್ನೆಗೆ ಜಯಂತ್ ನಸುನಕ್ಕು ''ನಿಮ್ಮ ಪ್ರಶ್ನೆ ಕೇಳಿದರೆ ಬಹು ಹಿಂದೆ ನನ್ನ ಗುರು ಫ್ರೆಡ್‌ನೊಂದಿಗೆ ಒಮ್ಮೆ ಅಮೆರಿಕೆಗೆ ಹೋಗಿದ್ದಾಗ ನಡೆದ ಘಟನೆ ನೆನಪಿಗೆ ಬರುತ್ತದೆ. ಯಾವುದೋ ಒಂದು ಕಾನ್ಫರೆನ್ಸ್ ಪ್ರಯುಕ್ತ ನಾವಿಬ್ಬರೂ ಲಾಸ್ ಏಂಜಲೀಸ್‌ಗೆ ಹೋಗಿದ್ದೆವು. ಸಂಜೆ ಬಿಡುವಿದ್ದುದರಿಂದ ಹತ್ತಿರದಲ್ಲಿದ್ದ ಅಕ್ವೇರಿಯಂ ಒಂದನ್ನು ನೋಡಲು ಹೋದೆವು. ಅಲ್ಲಿದ್ದ ಒಂದು ದೊಡ್ಡ ಕೊಳದಲ್ಲಿ ಚಿಕ್ಕ ಮೀನುಗಳು ಮತ್ತು ದೊಡ್ಡ ಮೀನುಗಳು ಒಟ್ಟಿಗೆ ಈಜಾಡುತ್ತಿದ್ದವು. ಅದನ್ನು ನೋಡಿ ''ಫ್ರೆಡ್, ಜಯಂತ್, ವೆಲ್‌ಫೇರ್ ಸಮಾಜ ವ್ಯವಸ್ಥೆಗೆ ಒಗ್ಗಿಕೊಂಡರೆ ಹೀಗೇ ಆಗೋದು'' ಅಂತ ನಗುತ್ತಾ ಹೇಳಿದರು. ಸಾಮಾನ್ಯವಾಗಿ ದೊಡ್ಡ ಮೀನು, ಚಿಕ್ಕ ಮೀನುಗಳನ್ನು ನುಂಗುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಎಲ್ಲ ಮೀನುಗಳಿಗೂ ಆಹಾರ ಕಷ್ಟವಿಲ್ಲದೆಯೇ ಸಮಯಕ್ಕೆ ಸರಿಯಾಗಿ ಸಿಕ್ಕರೆ ದೊಡ್ಡ ಮೀನು, ಚಿಕ್ಕ ಮೀನನ್ನು ತಿನ್ನುವ ಕಷ್ಟವನ್ನಾದರೂ ಏಕೆ ಪಡಬೇಕು? ಇಂಗ್ಲೆಂಡಿನ ಇಂದಿನ ಪರಿಸ್ಥಿತಿಗೂ ಇದೇ ಕಾರಣ ಅನ್ನಿಸುತ್ತೆ. ಕೆಲಸ ಮಾಡದೇ ಸುಮ್ಮನೇ ಕುಳಿತಿರುವವರಿಗೂ ಸರ್ಕಾರ ನಿರುದ್ಯೋಗ ಭತ್ಯೆ , ವಸತಿ ಇವುಗಳನ್ನು ಉಚಿತವಾಗಿ ಕೊಟ್ಟು ಅಭ್ಯಾಸ ಮಾಡಿಸಿಬಿಟ್ಟಿದ್ದಾರೆ. ಈಗ ಆರ್ಥಿಕ ಮುಗ್ಗಟ್ಟಿನಿಂದಾಗಿ ಕೆಲವು ಸವಲತ್ತುಗಳನ್ನು ನಿಲ್ಲಿಸಬೇಕಾಗಿ ಬಂದಿದೆ. ಇದರಿಂದ ಕೆಲಸವಿಲ್ಲದ, ಕೆಲಸ ಮಾಡಲೊಲ್ಲದ ಜನತೆ ರೊಚ್ಚಿಗೆದ್ದು ಲೂಟಿ, ಸುಲಿಗೆಗಳಿಂದ ತಮ್ಮ ಅಸಮಾಧಾನ ಪ್ರಕಟಿಸಿದ್ದಾರೆ'' ಅಂತ ಹೇಳಿದರು.

ಅರವತ್ತರ ದಶಕದಲ್ಲಿ ಫ್ರೆಡ್ ಹಾಯ್ಲ್ ಮತ್ತು ಜಯಂತ್ ನಾರ್ಲೀಕರ್ ಇವರುಗಳು ಒಂದು ಹೊಚ್ಚ ಹೊಸ ವಿಶ್ವ ಸೃಷ್ಟಿಯ ಥಿಯರಿಯನ್ನು ಪ್ರತಿಪಾದಿಸಿದ್ದರು. ಇವರುಗಳ ಚಿಂತನೆಯ ಪ್ರಕಾರ ನಮ್ಮ ಈ ಅಗಾಧ ವಿಶ್ವ ಎಂದಿನಿಂದಲೂ ಅನಾದಿ ಮತ್ತು ಅನಂತ. ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ಇದು ಸೃಷ್ಟಿ ಆಗಿಲ್ಲ. ನಕ್ಷತ್ರಗಳು ಈ ವಿಶ್ವದಲ್ಲಿ ಸತತವಾಗಿ ಹುಟ್ಟುತ್ತಿರುವಂತೆಯೇ ಇತರ ನಕ್ಷತ್ರಗಳು ತಮ್ಮ ಅಂತ್ಯವನ್ನು ಕಾಣುತ್ತಿರುವುದರಿಂದ ಆಗಸದಲ್ಲಿ ನಾವು ಕಾಣುವ ನಕ್ಷತ್ರಗಳ ಸಂಖ್ಯೆ ಒಂದೇ ಇರುವಂತೆ ಕಾಣುತ್ತದೆ. ಇದನ್ನ ಈ ವಿಜ್ಞಾನಿ ದ್ವಯರು ಸ್ಟೆಡಿ ಸ್ಟೇಟ್ ಥಿಯರಿ ಅಂತ ಕರೆದರು. ಈ ಸಮಯದಲ್ಲೇ ಇನ್ನೊಂದು ವಾದ ಹುಟ್ಟಿಕೊಂಡಿತು. ಸುಮಾರು ಹದಿನೈದು ಬಿಲಿಯನ್ ವರ್ಷಗಳ ಹಿಂದೆ ಒಂದು ಮಹಾ ಸ್ಫೋಟವಾಗಿ ಆಗ ಸಮಸ್ತ ವಿಶ್ವ ಸೃಷ್ಟಿಯಾಯಿತು ಎನ್ನುವ ಈ ವಾದವನ್ನು ಬಿಗ್ ಬ್ಯಾಂಗ್ ಥಿಯರಿ ಅಂತ ಅನ್ವರ್ಥವಾಗಿ ಹೆಸರಿಸಲಾಯಿತು. ಕಾಲ ಸರಿದಂತೆ ಈ ಬಿಗ್ ಬ್ಯಾಂಗ್ ವಾದಕ್ಕೆ ಅನೇಕ ಪುಷ್ಟೀಕರಣಗಳು ದೊರೆತು ಈಗ ಅದು ಎಲ್ಲ ವಿಜ್ಞಾನಿಗಳೂ ಒಪ್ಪುವ ವಾದವಾಗಿ ಪರಿಣಮಿಸಿದೆ. ಇರಲಿ.

ಅಷ್ಟು ಹೊತ್ತಿಗೆ ನಾವು ಕುಳಿತಿದ್ದ ಕಾರಿಡಾರ್ ವಿಶ್ವದಲ್ಲಿ ಸೊಳ್ಳೆಗಳ ಕಾಟ ಶುರುವಾಯಿತು. ಏನು ಮಾಡೋಣ ಅಂತ ಚಡಪಡಿಸುತ್ತಿದ್ದಾಗ ''ನಾವೆಲ್ಲಾ ನಮ್ಮ ಕುರ್ಚಿಗಳನ್ನು ಕಾರಿಡಾರಿನ ಆಚೆ ಇರುವ ಹುಲ್ಲು ಹಾಸಿನ ಮೇಲೆ ಹಾಕಿ ಅಲ್ಲಿ ಕೂಡೋಣ. ಬೀಸುವ ಗಾಳಿಯಿಂದಾಗಿ ಸೊಳ್ಳೆಗಳು ಅಲ್ಲಿ ನಮ್ಮನ್ನು ಕಾಡುವುದಿಲ್ಲ'' ಎಂದು ಹೊವಾರ್ಡ್ ಹೇಳಿದ. ನಾವೆಲ್ಲಾ ಅವನು ಹೇಳಿದಂತೆಯೇ ಮಾಡಿದೆವು. ಸೌಜನ್ಯಶೀಲ ಹೊವಾರ್ಡ್ ಮಂಗಳಾ ಅವರು ಕುರ್ಚಿ ಎತ್ತುವುದಕ್ಕೆ ಬಿಡದೇ ತಾನೇ ಅವರ ಕುರ್ಚಿಯನ್ನೂ ಹೊರಗೆ ಇಟ್ಟುಕೊಟ್ಟ. ಎಲ್ಲರೂ ಕುಳಿತೆವು. ಬೀಸುತ್ತಿದ್ದ ಗಾಳಿ ತಂಪನ್ನು ತಂದಿತ್ತು. ವರಮಹಾಲಕ್ಷ್ಮಿ ಮರುದಿನದ ಹುಣ್ಣಿಮೆಯ ಚಂದ್ರ ಆಗತಾನೆ ಮೋಡಗಳಿಂದಾಚೆ ಬಂದು ತನ್ನ ಗಗನ ಯಾತ್ರೆ ಮುಂದುವರಿಸಿದ್ದ.

ಅಷ್ಟು ಹೊತ್ತಿಗೆ ಮಂಗಳಾರವರ ಮೊಬೈಲ್ ರಿಂಗಾಯಿತು. ಆಕೆ ಮೆಲುದನಿಯಲ್ಲಿ ತಮ್ಮ ಮಾತನ್ನು ಮುಗಿಸಿ, ''ಇಂದು ರಕ್ಷಾಬಂಧನ್. ನಮ್ಮಣ್ಣ ಫೋನ್ ಮಾಡಿದ್ದು. ಫೋನಿನಲ್ಲೇ ರಕ್ಷಾಬಂಧನ್ ಮಾಡಿಬಿಟ್ಟ'' ಅಂತ ನಕ್ಕರು. ಹೊವಾರ್ಡ್ ತನ್ನ ಸಂದೇಹವನ್ನು ಜಯಂತ್‌ರ ಮುಂದಿಟ್ಟ. ''ಪ್ರೊಫೆಸರ್, ನಾನು ನ್ಯೂಜರ್ಸಿಯಲ್ಲಿ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ನಿಮ್ಮ ಫೋಟೋನ ಟೈಮ್ ಸಂಚಿಕೆಯ ಮೇಲೆ ನೋಡಿದ್ದೆ. ಆಗತಾನೇ ನೀವು ನಿಮ್ಮ ವಿಶ್ವ ಸೃಷ್ಟಿಯ ವಾದ ಪ್ರತಿಪಾದಿಸಿದ್ದಿರಿ. ಭೌತಶಾಸ್ತ್ರದ ವಿದ್ಯಾರ್ಥಿಗಳಾದ ನಮಗೆಲ್ಲಾ ನಿಮ್ಮನ್ನು ಕಂಡರೆ ಒಂದು ಬಗೆಯ ಭಕ್ತಿಭಾವ. ಈಗ ಬಹುತೇಕ ವಿಜ್ಞಾನಿಗಳು ಬಿಗ್‌ಬ್ಯಾಂಗ್ ವಾದವನ್ನು ಒಪ್ಪುತ್ತಾರೆ. ಅಂದರೆ ನಿಮ್ಮ ಸ್ಟೆಡಿಸ್ಟೇಟ್ ವಾದ ಈಗ ವಾಸ್ತವ ಅಲ್ಲ ಎನ್ನುತ್ತೀರಾ'' ಅಂತ ಹೊವಾರ್ಡ್‌ನ ಪ್ರಶ್ನೆ.

ಜಯಂತ್ ಹೇಳಿದರು. ''ಹಾಗೇನಿಲ್ಲಾ ಹೊವಾರ್ಡ್. ಇಂತಹ ಥಿಯರಿಗಳನ್ನು ಪ್ರತಿಪಾದಿಸುವಾಗ ಎಲ್ಲರ ವಾದಗಳೂ ಚೆನ್ನಾಗಿ ತರ್ಕಮಾಡಿ ಸಿದ್ಧಪಡಿಸಿದ ಊಹೆಗಳಷ್ಟೆ

ಬಿಗ್‌ಬ್ಯಾಂಗ್ ಕೂಡ ಈಗ ಕೇವಲ ಒಂದು ಥಿಯರಿ. ಹಲವು ಅಂಶಗಳಲ್ಲಿ ಅದು ಸದ್ಯಕ್ಕೆ ಮೇಲುಗೈ ಪಡೆದಿದೆ. ಅವರ ವಾದದ ಪ್ರಕಾರ ಈ ಸಮಸ್ತ ವಿಶ್ವ ಸೃಷ್ಟಿಯಾದದ್ದು ಹದಿನೈದು ಬಿಲಿಯನ್ ವರ್ಷಗಳ ಹಿಂದೆ. ಇತ್ತೀಚೆಗೆ ಒಬ್ಬ ವಿಜ್ಞಾನಿ ಇಪ್ಪತ್ತು ಬಿಲಿಯನ್ ವರ್ಷಗಳ ಹಿಂದೆ ಇದ್ದ ನಕ್ಷತ್ರವೊಂದನ್ನು ಪತ್ತೆ ಹಚ್ಚಿದ್ದಾನೆ. ಅದರ ವಯಸ್ಸಿನ ಬಗ್ಗೆ ಸದ್ಯಕ್ಕೆ ಚರ್ಚೆ ನಡೆದಿದೆ. ಅದು ಇಪ್ಪತ್ತೆಂದು ಸಾಬೀತಾದರೆ ಒಂದೇ ಕ್ಷಣದಲ್ಲಿ ನಿಮ್ಮ ಬಿಗ್‌ಬ್ಯಾಂಗ್ ವಾದವನ್ನು ಗಾಳಿಗೆ ತೂರಿಬಿಡಬೇಕಾಗುತ್ತದೆ. ಯಾವಾಗಲೂ ವಿಜ್ಞಾನದಲ್ಲಿ ಇದೇ ಸತ್ಯ ಎಂದು ಹೇಳುವ ಹಾಗಿಲ್ಲ. ನಮ್ಮ ಸತ್ಯದ ಮೇಲಣ ಮಸುಕನ್ನು ಯಾವನಾದರೊಬ್ಬ ಮಹಾನುಭಾವ ಸರಿಸುವವರೆಗೂ ನಮ್ಮ ಸತ್ಯಕ್ಕೆ ಚಲಾವಣೆ ಅಷ್ಟೆ'' ಎಂದರು.

ನಾರ್ಲೀಕರ್ ಅಧ್ಯಯನ ಮಾಡಿದ ಗುರುತ್ವಾಕರ್ಷಣೆಯ ವಿಷಯದಲ್ಲಿ ಬಳೂರಗಿ ಅವರಿಗೆ ಬಹು ಆಸಕ್ತಿ. ಹಾಗಾಗಿ ಅವರು ಬಾಯಿಹಾಕಿ, ''ಅರ್ರೀ ಸರ, ಈ ಗುರುತ್ವಾಕರ್ಷಣ ಶಕ್ತಿ ಬಗ್ಗೆ ನಮ್ಮ ಸಾಲಿ ಮಕ್ಕಳಿಗೆ ಸುಲಭವಾಗಿ ಕಲಿಸೂದು ಹ್ಯಾಂಗ ಅಂತ ಸ್ವಲ್ಪ ಹೇಳ್ರಲಾ'' ಅಂತ ವಿನಂತಸಿಕೊಂಡರು. ಜಯಂತ್ ಅವರು ಉತ್ತರಿಸುವ ಮುಂಚೆಯೇ ಅವರ ಪತ್ನಿ ಮಂಗಳಾ ಅವರು ಮುಂದಾಗಿ, ''ಜಯಂತ್ ಅವರು ಗುರುತ್ವಾಕರ್ಷಣೆ ಬಗ್ಗೆ ಒಂದು ಬಹು ಸರಳವಾದ ಪುಸ್ತಕ ಬರೆದಿದ್ದಾರೆ. The lighter side of Gravity ಅಂತ ಆ ಪುಸ್ತಕದ ಹೆಸರು. ನೀವು ಅದನ್ನು ಖಂಡಿತವಾಗಿ ತರಿಸಿಕೊಂಡು ನಿಮ್ಮ ಗ್ರಂಥಾಲಯದಲ್ಲಿ ಇಡಬೇಕು'' ಅಂತ ಶಿಫಾರಸ್ಸು ಮಾಡಿದರು. ಜಯಂತ್ ಮುಂದುವರಿಸುತ್ತಾ, ''ನ್ಯೂಟನ್ ಗುರುತ್ವಾಕರ್ಷಣೆ ಕಂಡು ಹಿಡಿಯುವುದಕ್ಕೆ ಬಹು ಹಿಂದೆಯೇ ನಮ್ಮ ದೇಶದ ಒಬ್ಬ ಮುನಿಪುಂಗವ ಈ ತತ್ವವನ್ನು ಕಂಡುಹಿಡಿದಿದ್ದ ವಿಷಯ ತಮಗೆ ತಿಳಿದಿದೆಯೇ?'' ಅಂತ ಗಂಭೀರವಾಗಿ ಕೇಳಿದರು. ''ಹೌದೇನ್ರೀ ಸರ'' ಎಂಬ ದಾನಪ್ಪನವರ ಉದ್ಗಾರದ ನಂತರ ಮಾತು ಮುಂದುವರೆಯಿತು.

''ಈ ಮುನಿಪುಗವನ ಹೆಸರು ಗುರುತ್ವಾನಂದ ಅಂತ. ಪ್ರಪಂಚದಲ್ಲೇ ಮೊದಲ ಬಾರಿಗೆ ಗುರುತ್ವಾಕರ್ಷಣೆಯ ತತ್ವವನ್ನು ಕಂಡುಹಿಡಿದಿದ್ದರಿಂದ ಈತನಿಗೆ ಆ ಹೆಸರು ಬಂದಿತು. ಈ ಮುನಿ ಇದ್ದದ್ದು ಗೋವಾದಲ್ಲಿರುವ ಪಣಜಿಯಲ್ಲಿ ನಿಮಗೆ ತಿಳಿದಿರುವ ಹಾಗೆ ಗೋವಾದಲ್ಲಿ ಸೇಬಿನ ಮರಗಳು ಅಪರೂಪ. ಕೇವಲ ಈ ಒಂದು ಕಾರಣದಿಂದ ನಮ್ಮ ಮುನಿಪುಂಗವ ತನ್ನ ಅನ್ವೇಷಣೆಯನ್ನು ನಿಲ್ಲಿಸುವುದಕ್ಕಾಗುತ್ತದೆಯೇ. ಖಂಡಿತ ಇಲ್ಲ. ತನ್ನ ಊರಿನ ಮರಳು ದಂಡೆಗಳ ಮೇಲೆ ವಿಪುಲವಾಗಿ ಹರಡಿದ್ದ ತೆಂಗಿನ ಮರವೊಂದರ ಅಡಿಯಲ್ಲಿ ಕುಳಿತ. ಪೂರ್ವ ನಿರ್ಧಾರಿತ ಕ್ಷಣದಲ್ಲಿ ಒಂದು ತೆಂಗಿನಕಾಯಿ ನಮ್ಮ ಅನ್ವೇಷಕನ ತಲೆಯ ಮೇಲೆ ಸರಿಯಾಗಿ ಬಿತ್ತು. ಗುರುತ್ವಾಕರ್ಷಣೆಯ ನಿಯಮ ಆ ಕ್ಷಣದಲ್ಲಿ ನಮ್ಮ ಮುನಿಪುಂಗವನಿಗೆ ಹೊಳೆಯಿತು. ಒಂದು ಕ್ಷಣ ಅಷ್ಟೇ. ಕ್ರೂರ ವಿಧಿಯ ಆಟದಿಂದ ಆ ಕ್ಷಣವೇ ಅವನ ಆಟ ಮುಗಿಯಿತು. ಅವನಿಗೆ ತನ್ನ ಅಪೂರ್ವ ಅನ್ವೇಷಣೆಯನ್ನು ಪ್ರಕಟಿಸುವ ಅವಕಾಶ ಸಿಗಲೇ ಇಲ್ಲ. ಹಾಗಾಗಿ ಗುರುತ್ವಾಕರ್ಷಣೆಯನ್ನು ಕಂಡುಹಿಡಿದ ಕೀರ್ತಿ ನ್ಯೂಟನ್ನನಿಗೆ ಸೇರಿತು.''

ನಮ್ಮೆಲ್ಲರ ನಗುವಿನೊಂದಿಗೆ ಬಳೂರಗಿಯವರೂ ದನಿಗೂಡಿಸಿದರು. ''ಈ ಕಥೆ ನನ್ನ ಸೃಷ್ಟಿಯಲ್ಲ. ಇದನ್ನು ನನಗೆ ಹೇಳಿದ್ದು ನಿಮ್ಮ ನಾಡಿನವರೇ ಆದ ಸಿ.ವಿ. ವಿಶ್ವೇಶ್ವರ ಅವರು. ಬಹು ಪ್ರತಿಭಾವಂತ ವಿಜ್ಞಾನಿ ಅವರು'' ಎಂದು ಜಯಂತ್ ಹೇಳಿದರು.



ಸಂಜೆಯ ಮಾತುಕತೆ ಮುಂದುವರಿಯಿತು. ವಿಷಯಗಳ ವೈವಿಧ್ಯತೆಗೆ ಏನೂ ಕೊರತೆ ಇರಲಿಲ್ಲ. ವಿವಿಧ ಮೂಲಿಕೆಗಳು, ಪಕ್ಷಿಗಳ ವಲಸೆ ವರ್ತನೆಗಳು, ಇವುಗಳ ಬಗ್ಗೆ ಮಂಗಳಾರವರ ಅಗಾಧ ಪಾಂಡಿತ್ಯದ ಪರಿಚಯ ಅಂದು ನಮಗಾಯಿತು. ಹೊವಾರ್ಡ್ ಮಕ್ಕಳಿಗೆ ಪಾಠಕಲಿಸುವಾಗ ಮನುಷ್ಯ ದೇಹದ ಚಲನವಲನಗಳನ್ನು ಉಪಯೋಗಿಸಿ ಪಾಠ ಅರ್ಥವಾಗುವಂತೆ ಮಾಡುವ ಕೈನೆಸ್ತೆಟಿಕ್ಸ್ ಕಲೆಯನ್ನು ನಮಗೆಲ್ಲಾ ಪರಿಚಯಿಸಿದ.

ಅಂದಿನ ಅನುಭವಗಳ ಮಹಾಪೂರದಲ್ಲಿ ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತ ಒಂದು ಅಂಶವೆಂದರೆ ನಾರ್ಳೀಕರ್ ದಂಪತಿಗಳ ನಮ್ರತೆ ಹಾಗೂ ಸ್ನೇಹಪರತೆ. ಇವರನ್ನು ಭೇಟಿ ಮಾಡುವ ಮೊದಲು ಅವರನ್ನು ಕೇಳಬೇಕಾದ ಪ್ರಶ್ನೆಗಳ ಉದ್ದವಾದ ಪಟ್ಟಿಯೊಂದನ್ನು ಮಾಡಿ ಕೊಂಡಿದ್ದೆ. ಅವರ ಆತ್ಮೀಯತೆಯ ಸವಿಯನ್ನು ಅನುಭವಿಸಿದ ನಂತರ ಇಂತಹ ಪ್ರಶ್ನೆಗಳು, ಅವುಗಳಿಗೆ ದೊರಕುವ ಉತ್ತರಗಳು ಇವೆಲ್ಲಕ್ಕಿಂತ ಮೌಲಿಕವಾದದ್ದು ಮನುಷ್ಯನ ಸಾತ್ವಿಕ ನಡವಳಿಕೆ, ಸಜ್ಜನತೆ ಎಂಬ ಸತ್ಯ ತೀವ್ರವಾಗಿ ಹೊಳೆಯಿತು.

**ಶಿವಕುಮಾರ್**

---

**ಲೇಖಕರಲ್ಲಿ ವಿನಂತಿ**

ದಯವಿಟ್ಟು ನಿಮ್ಮ ಲೇಖನಗಳನ್ನು ನುಡಿ ಅಥವಾ ಬರಹ ತತ್ರಾಂಶ ಬಳಸಿ ಕಳುಹಿಸಿ. ಹಸ್ತಪ್ರತಿಯನ್ನು ಸ್ವೀಕರಿಸುವುದು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ನಿಮ್ಮ ಸಹಕಾರಕ್ಕಾಗಿ ಧನ್ಯವಾದಗಳು.

# ಅಪಶಕುನ ಪಿಶಾಚಿ!

**- ಇ.ಆರ್. ರಾಮಚಂದ್ರನ್**

**ನ**ನ್ನ ಸ್ನೇಹಿತ ಡಾ|| ಗೋಪಿನಾಥ್ ಅಲಿಯಾಸ್ ಗೋಪಿ ಅಮೇರಿಕಾದ ನಾಸಾದಲ್ಲಿ ಬಹಳ ದೊಡ್ಡ ಸೈಂಟಿಸ್ಟ್, ಇಸ್ರೋದಲ್ಲಿ ಸ್ವಲ್ಪ ವರ್ಷ ಕೆಲಸ ಮಾಡಿ, ಆಮೇಲೆ ಅಮೇರಿಕಾದ ನಾಸಾದಲ್ಲಿ ರಾಕೆಟ್ ಡಿಸೈನರ್ ಆಗಿ ರಿಟೈರ್ ಆದಮೇಲೆ ಈಗ ವಾಪಸ್ಸು ಬಂದು ಬೆಂಗಳೂರಿನಲ್ಲಿ ನೆಲಸಿದ್ದಾನೆ.

ಹೈಸ್ಕೂಲಿನಲ್ಲಿದ್ದಾಗ ಜೈಮಿನಿ ಭಾರತವನ್ನೆಲ್ಲಾ ನಮ್ಮ ಜೊತೆ ಸೇರಿ ಉರು ಹೊಡೆದು ಆಮೇಲೆ ಏರೋನಾಟಿಕ್ಸ್ ಓದಿ ಜೆಮಿನಿ, ಅಪೋಲೊ ಪ್ರಾಜೆಕ್ಟಿನಲ್ಲಿ ಕೆಲಸಮಾಡಿ ಬಹಳ ಹೆಸರು ವಾಸಿಯಾಗಿದ್ದ.

ಬಹಳ ವರ್ಷದ ಬಳಿಕ ಬಂದ ಗೋಪಿಯನ್ನು ಎಲ್ಲಾ ಸ್ನೇಹಿತರೂ ಸ್ವಾಗತಿಸಿದರು.

'ಗೋಪಿ, ನೀನು ಪಿಳ್ಳುಜ್ಜ ಇಟ್ಕೊಂಡ್ ಬರ್ತಿದ್ದೆ ಕ್ಲಾಸಿಗೆ! ಅದನ್ನು ಎಳೆದಾಗ ಗೊಳೋ ಅಂತ ಅಳ್ತಾ ಇದ್ದೆ, ನಿಮ್ಮಜ್ಜಿ ಬಂದು ನಮಗೆಲ್ಲಾ ಮೂಳೆ ಮುರಿಯೋವ್ರು. ಈಗ ನೋಡಿದ್ರೆ ನೀನು ಅಮೇರಿಕದಲ್ಲೇ ಹುಟ್ಟಿದ್ದು ಅನ್ನೋ ತರಾ ಇದೀಯ!' ಅಂದ ನಾಣಿ. ನಾಣಿ, ಅರ್ಥಾತ್ ನಾರಯಣಾಚಾರ್, ಎಲ್.ಐ.ಸಿ.ಲಿ ಕೆಲಸ ಮಾಡಿ ಈಗೀಗ ನಿವೃತ್ತಿಯಾಗಿದ್ದಾನೆ.

'ಲೇ ಆಚಾರಿ! ಈಗಲೂ ನೀನು ತರಲೇ ಮಾಡೋದು ಬಿಟ್ಟಿಲ್ವಲ್ಲ! ನಿನ್ನ ಜುಟ್ನ ಏನ್ ಮಾಡ್ಕೊಂಡ್ಯೋ? ಟೆನ್ನಿಸ್ ಬಾಲಿನಷ್ಟು ದಪ್ಪ ಇರ್ತಿತ್ತು. ಮೂಗ್ನಿಂದ ಗೊಣ್ಣೆ ಸುರಿಸ್ಕೊಂಡ್ ಬರ್ತಿದ್ದೆ.'

ನಾವೆಲ್ಲಾ ಹಳೆಯದನ್ನು ನೆನಪಿಸಿಕೊಂಡು ನಗುತ್ತಿರುವಾಗ ಗೋಪಿ, 'ಇನ್ಸ್ಟಿಟ್ಯೂಷನ್ ಅಫ್ ಇಂಜಿನಿಯರ್ಸ್ ಅವರು ನಾಸಾ ಪ್ರೋಗ್ರಾಂ ಮೇಲೆ ಲೆಕ್ಚರ್ ಕೊಡೋದಕ್ಕೆ ನನ್ನ ಕರೆದಿದ್ದಾರೆ ನೀವು ಬನ್ರೋ' ಅಂದ.

ನಾವೆಲ್ಲಾ ರಿಟೈರ್ ಆದ ಮೇಲೆ ಆಲ್ವೇಸ್ ಅವೇಲಬಲ್. ಚಪ್ಪಾಳೆ ತಟ್ಟಕ್ಕೆ ಎವರ್ ರೆಡಿ. ಕಾಫಿ ಮಧ್ಯೆ ಬರ್ತಾ ಇರ್ಬೇಕು ಅಷ್ಟೆ.

ಗೋಪಿಯ ಪವರ್ ಪಾಯಿಂಟ್ ಲೆಕ್ಚರ್ ಅಮೋಘವಾಗಿತ್ತು.

ಚಂದ್ರನಿಂದ ಮಂಗಳಕ್ಕೆ, ಮಂಗಳದಿಂದ ಶುಕ್ರಕ್ಕೆ ನಾಸಾ ಮಾಡಿದ ರಾಕೆಟ್‌ಗಳಿಂದ ಹೇಗೆ ಜಿಗಿಯಬಹುದು ಅಂತ ಗೋಪಿ ತೋರಿಸಿ ವಿವರಿಸಿದ.

ಚಿಕ್ಕವನಾಗಿದ್ದಾಗ ಮರಕೋತಿ ಆಟದಲ್ಲೂ ಗೋಪಿ ಕೋತಿಯ ಹಾಗೆ ಜಿಗಿಯುತ್ತಿದ್ದ ಅಂತ ನಾವು ಪಿಸುಗುಟ್ಟುತ್ತ ನಕ್ಕೆವು.

ಮುಂಬರುವ ಶತಮಾನಗಳಲ್ಲಿ ಮನುಷ್ಯ ಹೇಗೆ ಗ್ರಹದಿಂದ ಗ್ರಹಕ್ಕೆ ನಾವುಗಳು ಈಗ ಸಿಟಿ ಬಸ್ಸಿನಲ್ಲಿ ಪ್ರಯಾಣ ಮಾಡುವುದಕ್ಕಿಂತ ಸುಲಭವಾಗಿ ಹೋಗ ಬಲ್ಲ ಅಂತ ತೋರಿಸಿಕೊಟ್ಟ, ಸೂರ್ಯಮಂಡಲದಿಂದ ಹೊರಗೆ ಹೋಗಲೂ ಸಾಧ್ಯ ಅಂತ ನಿರೂಪಿಸಿದ.

ಒಟ್ಟಿನಲ್ಲಿ ಮನುಷ್ಯ ತನ್ನ ಸಾಮರ್ಥ್ಯದಿಂದ ಏನು ಬೇಕಾದರೂ ಸಾಧಿಸಲು ಸಾಧ್ಯ ಅಂತ ಅನ್ನಿಸ್ತು. ಮನಸ್ಸಿದ್ದಲ್ಲಿ ಮಾರ್ಗ.

ಪ್ರೋಗ್ರಾಂ ಮುಗಿಸಿ ವಾಪಸ್ಸು ವಿಶ್ವೇಶ್ವರಪುರಂ ಸರ್ಕಲ್ ಹತ್ತಿರ ಬಂದಾಗ ನಮ್ಮ ನಾಲ್ಕನೆಯವ ಸಂಪತ್ತು, 'ನಡೀರೋ ಟೂ ಬೈ ಫೋರ್ ಬಾದಾಮಿ ಹಾಲು ಕೊಡಿಸ್ತೀನಿ' ಅಂದಾಗ ನಾನು ಗಾಡಿ ನಿಲ್ಸಿದೆ.

'ಲೇ ಐಯಂಗಾರಿ! ಈಗ್ಲೂ ಜಿಪುಣ್ತನ ಬಿಟ್ಟಿಲ್ವಲ್ಲೋ! ಸೇಮ್ – ದುಡ್ಡಿಲ್ಲಾ ಕಾಸಿಲ್ಲಾ ಸಂಪತ್ತೈಯಂಗಾರಿ – ಟೂ ಬೈ ಫೋರ್‌ನಿಂದ ಯಾವಾಗ ಹೊರಗೆ ಬರ್ತಿಯೋ' ಅಂತ ಹೇಳ್ತಿದ್ದ ಗೋಪಿ ಇದ್ದಕ್ಕಿದಂತೆ, 'ಸ್ಟಾಪ್! ಮುಂದೆ ಹೋಗ್ಬೇಡ್ರೋ' ಅಂತ ತಡೆದ.

ನಮ್ಮೆದುರು ಒಂದು ಬೆಕ್ಕು ರೋಡ್ ಕ್ರಾಸ್ ಮಾಡ್ತಿತ್ತು.

'ಬೆಕ್ಕು ಹೋದ್ರೆ ಏನೋ.... ಅದು ಅದರ ಪಾಡಿಗೆ ಅದು ಹೋಗ್ತಾ ಇದೆ ಪಾಪ. ನಮ್ಮನ್ನು ನೋಡಿ ಅದು ಎಷ್ಟು ಹೆದರಿಕೊಂಡಿತೋ ಏನೋ... ಏನು ಆಗೊಲ್ಲ, ಬಾರೋ' ಅಂದ ನಾಣಿ.

'ಲೇ ಆಚಾರಿ! ಅದು ಕರೀ ಬೆಕ್ಕು ಬೇರೆ! ಯಾವ ಗ್ರಹಚಾರ ಕಾದಿದೆಯೋ! ಮುಂದೆ ಗಾಂಧಿ ಬಜಾರ್‌ನಲ್ಲಿ ಕುಡಿಯೋಣ, ಇಲ್ಲಿ ಬೇಡಾ' ಅಂತ ಗೋಪಿ ಹಠ ಹಿಡಿದ.

'ಸರಿ ಅಲ್ಲೇ ಹೋಗೋಣ! ನಿನ್ನ ಹರ್ಷ ಸ್ಟೋರ್ಸ್, ಗಣೇಷ ಸ್ಟೋರ್ಸ್ ಎಲ್ಲಾ ಇಲ್ಲ ಈಗ' ಅಂದೆ ಗಾಡಿ ಸ್ಟಾರ್ಟ್ ಮಾಡ್ತಾ.

'ಅಲ್ವೋ ಗೋಪಿ! ನೀನು ಗ್ರಹದಿಂದ ಗ್ರಹಕ್ಕೆ ಹೇಗೆ ಹಾರ್ಬಹುದೂ ಅಂತ ಭಾಷಣ ಬಿಗೀತಿಯ! ಬೆಕ್ಕು ಎದುರ್ಗ್ಬಂದ್ರೆ ಯಾವ ಗ್ರಹಚಾರ ಕಾದಿದ್ಯೋ ಅಂತ ಒಂದು ಮಾರು ಹಾರ್ತಿಯಾ! ನೀನು ಟೂ ಇನ್ ವನ್ ಸೈಂಟಿಸ್ಟ್ ಆಗ್ಬಿಟ್ಟೀದಿಯಾ, ಏರೋನಾಟಿಕ್ಸ್ ಮತ್ತು ಅಸ್ಟ್ರಾಲಜಿ ಫಿಫ್ಟಿ-ಫಿಫ್ಟಿ!' ಸಂಪತ್ತು ಗೋಪೀನ ಹೀಯಾಳಿಸ್ದ.

'ಲೋ ಐಯಂಗಾರಿ ಪುಳ್ಳೆ! ನಮ್ಮ ಶಾಸ್ತ್ರದಲ್ಲೇ ಹೇಳಿದೆ. ಯಾವ ಕಾರ್ಯಕ್ಕೂ ಮುಂಚೆ ಬೆಕ್ಕು ಅಡ್ಡ ಬಂದ್ರೆ ಅಪಶಕುನ' ಅಂತ.

'ನಮ್ದು ಏನೋ ದೊಡ್ಡ ಕಾರ್ಯ! ಈ ಐಯಂಗಾರಿ ಕೊಡಿಸೋ ಟೂ ಬೈ ಫೋರ್ ಬಾದಾಮಿ ಹಾಲ್ ಕುಡ್ಯೋದಕ್ಕೆ!' ಅಂದ ನಾಣಿ.

ಗಾಂಧಿ ಬಜಾರ್ನಲ್ಲಿ ಬಾದಾಮಿ ಹಾಲು ಕುಡಿದು ಮನೆಗಳಿಗೆ ಹೊರಟ್ವಿ.

ಅದಾದ ಮುಂದಿನ ಭಾನುವಾರ ನಾಣಿ ಮೊಮ್ಮಗನಿಗೆ ಮುಂಜಿ. ಗೋಪಿ, ಸಂಪತ್ತು ನಮ್ಮ ಮನೆಗೆ ಬಂದ್ರು. ಪಕ್ಕದ ಬೀದಿಯಲ್ಲಿರುವ ನಾಣಿ ಮನೆಗೆ ನಡೆದುಕೊಂಡೇ ಹೋಗುವ ಅಂತ ಹೊರಟೆವು.

ಬೀದಿಗೆ ಇಳಿಯುವುದಕ್ಕಿಲ್ಲ ಗೋಪಿ 'ವೈಟ್! ನೀವಿಬ್ಬರೂ ಮುಂದೆ ಹೋಗ್ತಿರಿ... ನಾನು ಹಿಂದೆ ಬರ್ತೀನಿ' ಅಂತ ನಿಂತ.

'ಲೋ ಗೋಪಿ! ತಿರಗಾ ಶುರು ಮಾಡ್ದ್ಯಾ ನಿನ್ ಶನಿ ಪುರಾಣಾನಾ! ಈಗ ಏನಾಯ್ತೋ?'

'ಒಳ್ಳೇ ಶುಭ ಕಾರ್ಯಕ್ಕೆ ಹೋಗ್ತಾ ಇದೀವಿ. ಮೂರು ಜನ ಒಟ್ಟಿಗ್ಹೋಗೋದ್ಬೇಡ ಅಂತ.'

'ಎಂಥಾ ಕಂತ್ರಿ ಸೈಂಟಿಸ್ಟ್ ನೀನು! ಮೂಢನಂಬಿಕೆ ಭೂತ ನಿನ್ನ ಬೆನ್ಹತ್ತಿದೆ! ನಾಸಾಗೆ ಅವಮಾನವಾಗ್ಬೇಕು ನಿನ್ನಂಥ ಸೈಂಟಿಸ್ಟ್ ಇಟ್ಕೊಂಡು! ಕೂತ್ರೆ, ನಿಂತ್ರೆ ಶಾಸ್ತ್ರ ಪುರಾಣ ಅಂತ ತೆಗೀತಿಯ!' ಅಂತ ಎಗರಾಡಿದ ಸಂಪತ್ತು.

'ಇಲ್ಲಾ ಕಣೋ! ಮೂರು ಜನ ಹೋದ ಕೆಲಸ ಹಾಳು ಅಂತ ನಮ್ಮ ಶಾಸ್ತ್ರದಲ್ಲೇ ಹೇಳಿದೆಯಲ್ಲೋ.'

'ಗೋಪಿ! ನಮ್ಮ ಶಾಸ್ತ್ರದಲ್ಲಿ ಎಷ್ಟೋ ಒಳ್ಳೇದೂ ಇದೆ. ಅವುಗಳನ್ನು ನಾವು ಯಾಕೆ ಅನುಸರಿಸಲ್ಲಾ? ಯಾವುದೋ ಅಡುಗೂಲಜ್ಜಿ ಕಾಲದ ಮೂಢನಂಬಿಕೆಯಲ್ಲಿ ವಿಶ್ವಾಸ ತೋರಿಸುವುದು ಯಾವ ನ್ಯಾಯ ಹೇಳು? ನಮ್ಮೆಲ್ಲರಲ್ಲಿ ನೀನೇ ಹೆಚ್ಚು ವಿದ್ಯಾವಂತ. ಅದರಲ್ಲೂ ನಾಸಾದಲ್ಲಿ ಕೆಲಸ ಮಾಡಿ ಮುಂದೆ ಮನುಷ್ಯ ಗ್ರಹ, ನಕ್ಷತ್ರಗಳಿಗೆ ಹೇಗೆ ಹೋಗಬಹುದು ಅಂತ ತಿಳಿಕೊಂಡಿದ್ದೀಯ. ಅದರ ವಿಷಯ ಘಂಟೆಗಟ್ಲೆ ಚೆನ್ನಾಗಿ ಬೋರೂ ಮಾಡ್ತೀಯ! ಇನ್ನೊಂದು ಕಡೆ, ಮಡಿ, ಮೈಲಿಗೆ ಅಂತ ನಮ್ಮ ಆಚಾರಿಗಿಂತ ಜಾಸ್ತಿ ಆಚಾರ ಮಾಡ್ತಿಯಾ!'

'ಹಾಗಲ್ಲಾಮ್ಮಾ.......' ಅಂತ ರಾಗ ತೆಗೆದ ಗೋಪಿ.

'ನೀನು ನಾಸಾಲಿ ಕೆಲಸ ಮಾಡುತ್ತಿದ್ದಾಗ, ರಾಕೆಟ್ ಲಾಂಚ್‌ಗೆ ಕೌಂಟ್ ಡೌನ್ ಮಾಡುತ್ತಿರುವಾಗ ನಿನ್ನ ಪ್ರಾಜೆಕ್ಟ್ ಡೈರೆಕ್ಟರ್ ಅತ್ತ ಸೀನಿದರೆ ತಕ್ಷಣವೇ ಅವರು ಅದನ್ನು ನಿಲ್ಲಿಸಿಬಿಡ್ತಾರಾ? ಇಬ್ಬರು ಆಸ್ಟ್ರೊನಾಟ್ಸ್ ಹೋಗುತ್ತಿರುವಾಗ, ಹಿಂದಿನಿಂದ ಒಬ್ಬರು ಕೂಗಿದರೆ, ಅವರಿಬ್ಬರ ಕೆಲಸಕ್ಕೆ ಅಪಶಕುನವಾಯಿತೆಂದು ಬೇಸರ ಪಟ್ಟು, ನಿಂತಲ್ಲೇ ಸ್ವಲ್ಪ ಹೊತ್ತು ಕುಳಿತು ಆಮೇಲೆ ಮುಂದೆ ಹೋಗ್ತಾರಾ? ನಾಸಾಲೇ ಕೆಲಸ ಮಾಡುವ ವಿಧವೆ ಎದುರಿಗೆ ಸಿಕ್ಕಿಬಿಟ್ಟರೆ ಏನು ಗತಿ? ಪ್ರಾಜೆಕ್ಟೇ ಕ್ಯಾನ್ಸಲ್ ಮಾಡ್ತಾರಾ? ಅದಕ್ಕೂ ಮುಖ್ಯವಾಗಿ ನಾಸಾ ವಿಧವೆಯರನ್ನು ಕೆಲಸಕ್ಕೆ ತೊಗೊಳ್ಳಬಹುದೆ? ಈ ತರಹ ಅಲ್ಲಿಯ ಅಧಿಕಾರಿಗಳು ಯೋಚಿಸುತ್ತಾರಾ?' ನೀನೇ ಯೋಚಿಸಿ ನೋಡು.

ಗೋಪಿ ಮೌನವಾಗಿದ್ದ.

'ಗೋಪಿ, ನಿನಗೆ ಬುದ್ಧಿ ಬಂದಿದೆ ಅನ್ಕೊಂಡಿದೀನಿ. ವಿದ್ಯಾರ್ಥಿ ಭವನ್ನಲ್ಲಿ ಟೂ ಬೈ ಫೋರ್ ದೋಸೆ ಕೊಡಿಸ್ತೀನಿ. ತಿರುಗ ಬೆಕ್ಕು, ಇಲಿ, ದೃಷ್ಟಿ ಅಂತ ಬಾಲಾ ಬಿಚ್ಚೇಡಾ, ನನ್ನಾಣೇಗೂ!' ಅಂದ ಸಂಪತ್ತು.

ಎಲ್ಲಾರೂ ಗಹಗಹಿಸಿ ನಗುತ್ತಾ ಒಳಗೆ ಹೋದೆವು.

✲

# ಸ್ವಾಮಿ ಪ್ರೇಮದೇವರ ಹೊಸ ಧ್ಯಾನ

- ಬಿ.ಕೆ. ಗಣೇಶ್

***(ಕ್ಷಮಿಸಿ, ಇನ್ನೊಬ್ಬರ ಪರ್ಸನಲ್ ವಿಷಯಕ್ಕೆ ತಲೆ ಹಾಕುವುದು ಸರಿಯಲ್ಲ ಅಂತ ಗೊತ್ತು. ಆದರೆ ಏನು ಮಾಡೋದು, ಆಕಸ್ಮಿಕವಾಗಿ ನಮ್ಮ ಯೋಗಗುರು ಪ್ರೇಮದೇವ್ ಅವರ ಪರ್ಸನಲ್ ಡೈರಿ ನಮ್ಮ ಕೈಗೆ ಸಿಕ್ಕಿಬಿಟ್ಟಿತು. ಸಿಕ್ಕ ಮೇಲೆ ಅದನ್ನು ಓದದೆ ಇರಲಿಕ್ಕೂ ಸಾಧ್ಯ ಆಗಿಲ್ಲ. ಕದ್ದುಮುಚ್ಚಿ ಓದಿಬಿಟ್ಟಿದ್ದೀವಿ. ಅದರಲ್ಲಿರುವ ಕೆಲವು ವಿಷಯಗಳನ್ನು ನಿಮಗೆ ಇಲ್ಲಿ ಸಾದರಪಡಿಸುತ್ತಿದ್ದೇವೆ. ನಿಮಗೂ ಇನ್ನೊಬ್ಬರ ಪರ್ಸನಲ್ ವಿಷಯ ಬೇಡ ಅಂತಿದ್ದರೆ ಬಿಟ್ಬಿಡಿ. ಇಲ್ಲಾಂದ್ರೆ ಓದಿ.. ಯಾರಿಗೂ ಹೇಳ್ಬೇಡಿ ಅಷ್ಟೇ.)***

**ಎ**ರಡು ದಿನಗಳಿಂದ ಯಾಕೋ ಮೈ ಸರಿ ಇಲ್ಲ. ಹೃದಯಾನೂ ಭಾರ ಅನ್ನಿಸ್ತಿದೆ. ಯಾವ ಯೋಗ ಮಾಡೋಕೂ ಮನಸ್ಸಾಗ್ತ ಇಲ್ಲ. ಹಿಂದೆಂದೂ ನನಗೆ ಹೀಗಾಗಿದ್ದು ನೆನಪಿಲ್ಲ. ಆದರೂ ಮೊನ್ನೆ ಮುಂಬೈನಲ್ಲಿ ನಡೆದ ಬೃಹತ್ ಕಾರ್ಯಕ್ರಮದಲ್ಲಿ ಕಷ್ಟಪಟ್ಟು ಯೋಗ ಮಾಡಿದ್ದನ್ನು ನೆನಪಿಸಿಕೊಂಡರೆ ಮೈ ಎಲ್ಲ ಬೆವರುತ್ತದೆ. ಹೊಟ್ಟೆಯನ್ನು ತಳಕ್ ಬಳಕ್ ಮಾಡಿದ ನಂತರ ಶವಾಸನ ಮಾಡಿದೆ. ಉಹುಂ, ಯಾಕೋ ಕಣ್ಣು ಮುಚ್ಚಿ ಉಸಿರು ಎಳೀಲಿಕ್ಕೇ ಆಗ್ತಾ ಇರಲಿಲ್ಲ. ಒಳ ಹೋದ ಉಸಿರೆಲ್ಲ ಅಲ್ಲೇ ಸಿಕ್ಕಿ ಹಾಕಿಕೊಂಡಿತೇನೋ ಅಂತ ಅನ್ನಿಸಿಬಿಟ್ಟಿತು.

ಅವತ್ತು ಜಂತರ್‌ಮಂತರ್ ವೇದಿಕೆಯಿಂದ ರಾತ್ರೋರಾತ್ರಿ ಎದ್ದುಬಿದ್ದು ಓಡಿದಾಗಲೂ ಇಷ್ಟು ನೋವಾಗಿರಲಿಲ್ಲ; ಚೂಡಿದಾರ್ ಹಾಕಿಕೊಂಡು ಕೂತಾಗ ಬಂದ ಪೊಲೀಸರು ಅರೆಸ್ಟ್ ಮಾಡಿದಾಗಲೂ ಇಷ್ಟು ನೋವಾಗಿರಲಿಲ್ಲ ಇವತ್ಯಾಕೆ ಇಷ್ಟೊಂದು ನೋವು. ಅರ್ಥಾನೇ ಆಗ್ತಾ ಇಲ್ಲ.

ಈಚೆಗೆ ಈ ಮೀಡಿಯಾದವರೂ ನನ್ನ ಹಿಂದೆ ಬಿದ್ದಿದ್ದಾರೆ. ಹರಿದ್ವಾರಕ್ಕೆ ಹೋಗ್ಲಿ ಅಲ್ಲೂನೂ ಒಂದಷ್ಟು ಜನ ಕಾದುಕೊಂಡು ಕೂತಿರ್ತಾರೆ. ಇನ್ನು ಬಾಂಬೆ, ದೆಲ್ಲಿಗೆ ಬಂದ್ರೆ ಹೇಳೋದೇ ಬೇಡ. ನಾನು ಉಸಿರು ಎಳೆದ್ರೂ ಸುದ್ದಿ, ಬಿಟ್ರೂ ಸುದ್ದಿ, ಉಪವಾಸ ಕೂತ್ರೂ ಸುದ್ದಿ, ಊಟ ಮಾಡಿದ್ರೂ ಸುದ್ದಿ. ಮೀಡಿಯಾದವರ ಕಾಟದಿಂದ ಉಸಿರು ಕಟ್ಟಿದ ಹಾಗೆ ಆಗ್ತಿದೆ. ಉಸಿರು ಕಟ್ಟಿದ ಮೇಲೆ ಪ್ರಾಣಾಯಾಮ ಎಲ್ಲಿಂದ ಮಾಡೋದು? ಮೂರು ದಿನ ಪ್ರಾಣಾಯಾಮಾನೂ ಸರಿ ಆಗ್ತಾ ಇಲ್ಲ.

ಇಷ್ಟೂ ವರ್ಷ ಕಾಪಾಡಿಕೊಂಡು ಬಂದಿದ್ದ ಮಾನಸಿಕ ಸ್ಥಿರತೆ ಒಮ್ಮಿಂದೊಮ್ಮೆಗೆ ನಾಶವಾಗಿಬಿಟ್ಟಿತ್ತೇನೋ ಎನ್ನಿಸುತ್ತಿದೆ. ಭ್ರಷ್ಟಾಚಾರ ವಿರೋಧಿ ಹೋರಾಟ, ಕಪ್ಪು ಹಣದ ಬಗ್ಗೆ ಆಸಕ್ತಿ ಕಡಿಮೆಯಾಗಿದೆ. ಅವತ್ತು ದೆಹಲಿಯಲ್ಲಿ ಆಮರಣಾಂತ ಉಪವಾಸ ಮುಷ್ಕರ ನಡೆಸಿದಾಗ ಇದ್ದ ಉತ್ಸಾಹ ಈಗ ಎಲ್ಲಿ ಹೋಯಿತು? ವಿಶ್ವಾಮಿತ್ರನ ಶ್ರದ್ಧೆಯನ್ನು ಮೇನಕೆ ಕೆಡಿಸಿದ ಹಾಗೆ ಈಕೆ ನನ್ನ ಪಾಲಿಗೆ ಬಂದಳೇ? ಇಲ್ಲ, ಸಾಧ್ಯವೇ ಇಲ್ಲ ಅಂತ ಕಣ್ಣು ಮುಚ್ಚಿ ಕೂತರೆ ಮತ್ತದೇ ಚಿತ್ರ.

''ನಾನು ಸ್ವಾಮಿ ಪ್ರೇಮದೇವ್‌ರನ್ನು ಮದುವೆಯಾಗ್ತೀನಿ'' ಅಂತ ಸಾಖಿ ರಾವಂತ್ ಹೇಳಿಕೆ ನೀಡಿದ ನಂತರ ನನ್ನ ಮನಸ್ಸು ಹೀಗಾಗ್ತಿದೆ. ಸಾಖಿಯನ್ನು ನಾನು ನೋಡೇ ಇಲ್ಲ. ಆಕೆ ಸಹ ನನ್ನ ಹಾಗೆಯೇ ಹೊಟ್ಟೆ ತಿರುವಿ ಬೆಲ್ಲಿ ಡ್ಯಾನ್ಸ್ ಮಾಡ್ತಾಳೆ ಅಂತ ಕೇಳಿದ್ದೆ. ನನ್ ಥರ ಅವಳ ಹತ್ರಾನೂ ಮೀಡಿಯಾದವರು ಸುತ್ತುತ್ತಿರುತ್ತಾರೆ ಅಂತೆ. ನಾನು ಭ್ರಷ್ಟಾಚಾರ ವಿರೋಧಿ ಹೋರಾಟ ಮಾಡಿದಾಗ ಸಪೋರ್ಟ್ ಮಾಡಿ ಸ್ಟೇಟ್‌ಮೆಂಟ್ ಕೊಟ್ಟಿದ್ಲಂತೆ. ಹೀಗೆ ನಂಗೂ ಆಕೆಗೂ ತುಂಬಾ ಸಾಮ್ಯತೆ ಕಾಣಿಸ್ತಾ ಇದೆ.

ಯಾಕೆ ಹೀಗೆಲ್ಲಾ ಸಾಮ್ಯತೆಗಳು ಕಾಣಿಸ್ತಾ ಇದೆ? ಅರ್ಥ ಆಗ್ತಾ ಇಲ್ಲ.

ಹೀಗೆಲ್ಲಾ ಕೂತು ಯೋಚನೆ ಮಾಡ್ತಿರಬೇಕಾದ್ರೆ ನಂಗೆ ಹೊಸ ಹೊಸ ಪ್ರಾಣಾಯಾಮ ಹೊಳೀತಾ ಇವೆ.

ಈ ಪ್ರಾಣಾಯಾಮದಲ್ಲಿ ಶ್ವಾಸಕೋಶಕ್ಕಿಂತ ಹೃದಯದ ಕೆಲಸ ಜಾಸ್ತಿ. ಇದೊಂದು ಬಗೆಯಲ್ಲಿ ಧ್ಯಾನ ಮತ್ತು ಪ್ರಾಣಾಯಾಮಗಳ ಮಿಶ್ರಣ. ಎದುರಿಗೆ ನಿಮ್ಮ ಮನಸ್ಸು ತುಂಬಿಕೊಂಡಿರುವವರನ್ನು ಧೇನಿಸಬೇಕು. ಹಾಗೆಯೇ ಕೂತು ಯೋಚನೆ ಮಾಡುತ್ತಾ ಇರಬೇಕು. ಕಣ್ಣುಮುಚ್ಚಿಕೊಂಡು ತುಂಬಾ ಹೊತ್ತು ಕೂರಬೇಕು. ಹೃದಯ ಮಧ್ಯೆ ಮನಸ್ಸು ತುಂಬಿಕೊಂಡವರನ್ನು ಪ್ರತಿಷ್ಠಾಪಿಸಬೇಕು ಹಾಗೆ ಮನಸ್ಸಿನಲ್ಲೇ. ಕೂತಲ್ಲೇ ಆ ವ್ಯಕ್ತಿ ಬಳಿಗೆ ಹೋಗಬೇಕು ಈ ಮಟ್ಟಕ್ಕೆ ಹೋಗಲು ಸಾಧನೆ ಬೇಕು. ಪ್ರಾಣಾಯಾಮದಲ್ಲಿ ಶ್ವಾಸಕೋಶ ವಿಕಸಿಸಿದ ಹಾಗೆ ಇಲ್ಲಿ ಹೃದಯವನ್ನು ವಿಸ್ತರಿಸಬೇಕು. ಒಂದರ್ಧ ಗಂಟೆ ಹಾಗೆಯೇ ಕೂತುಕೊಂಡರೆ ಹೃದಯ ಚಳಕ್ ಎನ್ನುತ್ತದೆ. ಇದಕ್ಕೆ ಇನ್‌ವಾಲ್ವ್‌ಮೆಂಟ್ ಬೇಕು. ಮುಖ್ಯ ಪರಿಣಾಮ: ಕಾಲವನ್ನು ಮೀರಿ ನಿಲ್ಲಬಹುದು. ಜಗತ್ತಿನಲ್ಲಾಗುವ ಯಾವ ಘಟನೆಗಳೂ ಅರಿವಿಗೆ ಬರುವುದಿಲ್ಲ. ಏಕಾಗ್ರತೆ ವೃದ್ಧಿಯಾಗುತ್ತದೆ. ಇದು ಆ ಸಾಖಿ ಸ್ಟೇಟ್‌ಮೆಂಟ್ ನೋಡಿದ ಮೇಲೆ ಹೊಳೆದದ್ದು. ಇದನ್ನು ಮಾಡಿ ಯಶಸ್ವಿಯಾಗಿದ್ದೇನೆ ಕೂಡ. ಈ ಹೊಸ ಬಗೆಯ ಪ್ರಾಣಾಯಾಮಕ್ಕೆ ಏನು ಹೆಸರಿಡೋದು ಅಂತ ಗೊತ್ತಾಗಿಲ್ಲ.

ನೋಡೋಣ, ಪ್ರೆಸ್‌ಮೀಟ್ ಕರೆದು ಹೇಳೋಣಾಂತಿದ್ದೀನಿ.

**(ಮುಂದಿನ ಹಾಳೆಗಳು ಸಿಕ್ಕಿಲ್ಲ)**

---

ಯಾರ ಬದುಕಿಗೆ ನೀವು ಒಂದು ಅಮುಖ್ಯರಾಗಿರುವಿರೋ
ಅಂಥವರು ನಿಮ್ಮ ಬದುಕಿಗೆ ಮುಖ್ಯರಾಗದಿರಲಿ.
ಸಂಬಂಧಗಳು ಯಾವಾಗಲೂ ಅರ್ಥೈಕ್ಯತೆಯ ತಳಹದಿಯ
ಮೇಲೆ ನಿಂತಿರಬೇಕು. ಆಗಲೇ ಅದು ಭದ್ರವಾಗಿರುತ್ತದೆ.

# ಈಮೇಲ್ ಫಾರವರ್ಡ್ ಎಂಬ ಕರ್ಮವು

*ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ಎಂಬುದು*
*ಈಮೇಲ್‌ಗಳಿಗೂ ಅನ್ವಯವಾಗುತ್ತದೆ ಎಂದು ಕೃಷ್ಣನೇ ಹೇಳಿದ್ದಾನೆ.*



**ಅರ್ಜುನ :** ಹೇ ವಾಸುದೇವ, ನನಗೆ ಬರುತ್ತಿರುವ ಈಮೇಲ್‌ಗಳನ್ನು ಸ್ನೇಹಿತರಿಗೆ, ಬಂಧುಗಳಿಗೆ, ಮತ್ತಿತರಿಗೆ ಫಾರವರ್ಡ್ ಮಾಡುವಂತಹ ಅಕ್ಷಮ ಕೆಲಸವನ್ನು ನಾನು ಮುಂದುವರೆಸಲೇಬೇಕೇ?

**ಕೃಷ್ಣ:** ಪಾರ್ಥ, ಈಗ ಅವರು ಯಾರೂ ನಿನ್ನ ಗೆಳೆಯರೂ ಅಲ್ಲ, ಬಂಧುಗಳೂ ಅಲ್ಲ, ದೊಡ್ಡವರೂ ಅಲ್ಲ, ಚಿಕ್ಕವರೂ ಅಲ್ಲ. ನೀನು ನಿನ್ನ ನೆಟ್ ಧರ್ಮವನ್ನು ಪಾಲಿಸಲೇಬೇಕು. ತಕ್ಷಣ ಲಾಗ್ ಆನ್ ಆಗಿ ಎಲ್ಲರಿಗೂ ಮೇಲ್‌ಗಳನ್ನು ಫಾರವರ್ಡ್ ಮಾಡುವಂತಹನಾಗು. ಇದು ನೀನು ಪಾಲಿಸಲೇಬೇಕಾದ ಧರ್ಮ. ನಿನ್ನ ಕರ್ಮವೂ ಹೌದು. ತಿಳಿ.

**ಅರ್ಜುನ :** ಹೇ ಮುರಳಿ, ನನ್ನ ಆತ್ಮ ಸಾಕ್ಷಿಯನ್ನು ಘಾಸಿ ಮಾಡುವಂತಹ ಕಾರ್ಯವನ್ನು ಮಾಡು ಎಂದು ನನಗೆ ಹೇಳದಿರು.

**ಕೃಷ್ಣ:** ಓ ಕುಂತಿ ಪುತ್ರನೆ, ಮಾಯೆಯೆಂಬ ವಿಷವ್ಯೂಹದಲ್ಲಿ ನೀನು ಸಿಕ್ಕಿಕೊಂಡಿದ್ದೀಯ. ಇಂದಿನ ಈ ಭೌತಿಕ ವಿಶ್ವದಲ್ಲಿ ನೀನು ನನಗೆ, ನಿನ್ನ ಧರ್ಮಕ್ಕೆ ಮತ್ತು ನಿನ್ನ ಮೌಸ್‌ಗೆ ಮಾತ್ರ ಬದ್ಧ, ಬೇರಾರಿಗೂ ಅಲ್ಲ. ಈಮೇಲ್‌ಗಳು 25 ವರ್ಷಗಳಿಂದ ಇವೆ. ನೀನು ಹೋದ ಮೇಲೂ ಇರುತ್ತವೆ. ಮಾಯೆಯಿಂದ ಹೊರ ಬಾ. ನಿನ್ನ ಕರ್ತವ್ಯವನ್ನು ನಿರ್ವಹಿಸು.

**ಅರ್ಜುನ :** ದೇವಾ, ಮಾಯೆಗೂ ಈ ಮೇಲ್‌ಗಳಿಗೂ ಇರುವ ಸಂಬಂಧವನ್ನು ವಿವರಿಸುವಂತಹವನಾಗು.

**ಕೃಷ್ಣ:** ವತ್ಸ ಕೇಳುವಂತಹವನಾಗು ಮಣ್ಣು, ನೀರು, ಬೆಂಕಿ, ಗಾಳಿ ಮತ್ತು ಆಕಾಶ ಎಂಬ ಪಂಚ ಮಹಾ ಭೂತಗಳಂತೆ ಈ ಮೇಲ್ 6ನೇ ಭೂತ. ಅದು ಜೀವವೂ ಹೌದು ನಿರ್ಜೀವವೂ ಹೌದು. ನಿಜ ಅವು ಕಂಪ್ಯೂಟರ್ ಸಿಸ್ಟಂ ಅನ್ನು ಓವರ್ ಲೋಡ್ ಮಾಡುತ್ತವೆ. ಆದರೆ ಅವು ಒಂದು ಮಹತ್ತರ ಕಾರ್ಯವನ್ನು ನಿರ್ವಹಿಸುತ್ತಿವೆ. ಅದೇನೆಂದರೆ ಅವುಗಳನ್ನು ಓದುವ ಮತ್ತು ಫಾರ್‌ವರ್ಡ್ ಮಂದಿ ತಾವೊಂದು ಬೌದ್ಧಿಕ ಕಸರತ್ತಿನಲ್ಲಿ ತೊಡಗಿಕೊಂಡಿದ್ದೇವೆ ಎಂದು ಭಾವಿಸಿಕೊಂಡಿರುತ್ತಾರೆ. ಏನೋ ಒಂದು ಮಹತ್ತರ ಕಾರ್ಯ ಮಾಡುತ್ತಿದ್ದೇವೆ ಎಂದು ಹೆಮ್ಮೆ ಸಹ ಪಡಬಹುದು ಅವರು. ಆತ್ಮ ಒಂದು ಶರೀರವನ್ನು ಬಿಟ್ಟು ಇನ್ನೊಂದು ಶರೀರವನ್ನು ಪ್ರವೇಶಿಸುವಂತೆ ಈಮೇಲ್‌ಗಳು ಒಂದು ಸಿಸ್ಟಂ ಬಿಟ್ಟು ಇನ್ನೊಂದು ಸಿಸ್ಟಂ ಪ್ರವೇಶಿಸುತ್ತವೆ. ಅವು ಸಾಯುವುದೂ ಇಲ್ಲ ಡಿಲೀಟಾಗುವುದೂ ಇಲ್ಲ.

**ಅರ್ಜುನ :** ಗ್ರೇಟ್, ಗಿರಿಧರ. ಈ ಈಮೇಲ್‌ಗಳ ನಿಜ ಲಕ್ಷಣಗಳನ್ನು ತಿಳಿಸುವಂತಹವನಾಗು.

**ಕೃಷ್ಣ:** ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ಎಂಬುದು ಈಮೇಲ್‌ಗಳಿಗೂ ಅನ್ವಯವಾಗುತ್ತದೆ. ಅವುಗಳನ್ನು ಜಯಿಸಲೂ ಆಗದು ಸೋಲಿಸಲೂ ಆಗದು. ಆತ್ಮದಂತೆ ಅವುಗಳಿಗೆ ಸಾವಿಲ್ಲ. ನೀನು ಕಳಿಸಿದ ಈ ಮೇಲ್ ನಿನಗೇ ಒಂದು ದಿನ ವಾಪಸ್ಸಾಗಿ ಮತ್ತೇ ಅದನ್ನೇ ನೀನು ಇನ್ನೊಬ್ಬರಿಗೆ ಮತ್ತೆ ರವಾನಿಸುವ ಸಾಧ್ಯತೆಯೂ ಇದೆ.

**ಅರ್ಜುನ :** ಹೇ ಭಗವಾನ್, ನನ್ನ ಕಣ್ತೆರೆಸಿದ್ದಕ್ಕೆ ನಿನಗೆ ಅನಂತ ಧನ್ಯವಾದಗಳು. ಇಷ್ಟು ದಿನ ನಾನೊಂದು ಮಾಯದ ಬಲೆಯಲ್ಲಿ ಸಿಕ್ಕಿಕೊಂಡಿದ್ದೆ. ನನಗೆ ಬರುವ ಎಲ್ಲ ಮೇಲ್‌ಗಳನ್ನೂ ಓದುತ್ತಿದ್ದೆ. ಇನ್ನ ಮುಂದೆ ನಾನು ಈಮೇಲ್ ಬಂದ ತಕ್ಷಣ ಅದನ್ನು ಓಪನ್ ಮಾಡದೇ ''ಫಾರವರ್ಡ್'' ಬಟನ್ ಒತ್ತುತ್ತಾ ಶತ್ರು, ಮಿತ್ರ, ಬಂಧು ಭಗಿನಿ, ಇನ್ ಲಾಗಳು, ದೊಡ್ಡವರು ಚಿಕ್ಕವರು ಹೀಗೆ ಎಲ್ಲರಿಗೂ ರವಾನಿಸತೊಡಗುವ ಕಾಯಕದಲ್ಲಿ ತೊಡಗಿಸಿಕೊಳ್ಳುವೆ. ಇದರಿಂದ ಅವರೆಲ್ಲ ಮಂಡಿಯೂರಿ ಶರಣಾಗುತ್ತಾರೆ.

**ಕೃಷ್ಣ:** ಅರ್ಜುನ, ಸೋಲು ಗೆಲವು ನಿನ್ನ ಕೈಗಳಲ್ಲಿಲ್ಲ. ನಿನ್ನ ಕಾಯಕದ ಇಷ್ಟಾರ್ಥಗಳ ಬಗ್ಗೆ ಯೋಚಿಸತೊಡಗಬೇಡ. ಸುಮ್ಮನೆ ಈಮೇಲ್‌ಗಳನ್ನು ಫಾರ್‌ವರ್ಡ್ ಮಾಡತೊಡಗು. ಎಲ್ಲರ ತಲೆ ಕೆಡಲಿ. ಆಗ ನೀನು ನಿನ್ನ ಮಹಾ ಕರ್ತವ್ಯವನ್ನು ನೆರವೇರಿಸಿದಂತೆ ಆಗುತ್ತದೆ. ತಥಾಸ್ತು.

**(ಇಂಟರ್‌ನೆಟ್ ಮೂಲಕ ಭಗವಂತನೇ ಕಳಿಸಿದ ಈಮೇಲ್ ಇದು!)**

✵

# ಭೂಗೋಳ ಗೋಳಾಗದಾಗ.....

***ಭೂಗೋಳವನ್ನೂ ಸ್ವಾರಸ್ಯಕರವಾಗಿ ಬೋಧಿಸಬಹುದು ಎಂಬುದನ್ನು ನರಸಣ್ಣ ಮಾಸ್ತರ್ ತೋರಿಸಿದರು ಎನ್ನುತ್ತಾರೆ ಅವರ ವಿದ್ಯಾರ್ಥಿಯೊಬ್ಬರು.***

**- ಚಂದ್ರಶೇಖರ್ ಬಾಲಚಂದ್ರನ್**

**ನಾ**ನು ನಾನಾ ವಿಷಯಗಳಿಗೆ ಸಂಬಂಧಪಟ್ಟಂತೆ ಬ್ಲಾಗ್ ಬರೀತೀನಿ. ಪಠ್ಯ ಪುಸ್ತಕಕ್ಕೆ ಸಂಬಂಧವಿಲ್ಲದ ಬ್ಲಾಗ್ ಬರೆದು ಭೂಗೋಳಶಾಸ್ತ್ರದಲ್ಲಿ ಮೊದಲು ಕುತೂಹಲ ಹುಟ್ಟಿಸುವುದು ನನ್ನ ಗುರಿ. ಕುತೂಹಲ ಕೆರಳಿಸುವುದಕ್ಕೆ ಅದೆಷ್ಟು ಕಥೆಗಳಿವೆ! ಕುತೂಹಲವನ್ನ ಕೆರಳಿಸಿದ ಮೇಲೆ ಪಠ್ಯ ಪುಸ್ತಕಕ್ಕೆ ಹೋಗುತ್ತೇನೆ.

ಈ ವಿಷಯದಲ್ಲಿ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ನನಗೆ ಭೂಗೋಳಶಾಸ್ತ್ರದ ಗುರುಗಳಾದ ಶ್ರೀ ನರಸಣ್ಣನವರೇ ನನಗೆ ಮಾದರಿ.

> **ಶಿಕ್ಷಕರ ದಿನಾಚರಣೆ**
> **ಪ್ರಾಮಾಣಿಕ ಶಿಕ್ಷಕರಿಗೆ**
> **ಅಪರಂಜಿ ಸಲಾಂ!**

ಅವರಿಗೂ ಮಕ್ಕಳಾದ ನಮ್ಮಂತೆಯೇ ಪಠ್ಯಪುಸ್ತಕಗತವಾದ ಭೂಗೋಳಶಾಸ್ತ್ರ ಅತಿ ಸಪ್ಪೆಯೆನಿಸುತ್ತಿತ್ತು. ಕ್ಲಾಸಿಗೆ ಬಂದವರೆ, ಸರಸರನೆ ಓದಿ, ನಾನಾ ಭಾಗಗಳನ್ನ ''ಅಂಡರ್ಲೈನ್'' ಮಾಡಿಸಿ, ಆ ಪಠ್ಯಪುಸ್ತಕವನ್ನು ಬದಿಗಿಡಿಸಿಬಿಟ್ಟು, ಕಥೆಗಳ ಮೂಲಕ ಸ್ವಾರಸ್ಯವಾದ ಭೂಗೋಳಶಾಸ್ತ್ರದ ಮತ್ತು ಚರಿತ್ರೆಯ ವಿಷಯಗಳನ್ನು ಬೋಧಿಸುತ್ತಿದ್ದರು. ಅಂದಂದಿನ ವಾರ್ತಾ ಪತ್ರಿಕೆಗಳಲ್ಲಿದ್ದ ವಿಷಯಗಳನ್ನು ಹೇರಳವಾಗಿ ಬಳಸುತ್ತಿದ್ದರು. ನಾವು ಓದಿದ್ದು ಇಂಗ್ಲೀಷ್ ಮೀಡಿಯಂ ಆದರೂ ಅವರ ಪಾಠಗಳನ್ನು ಹೆಚ್ಚು ಪಾಲಿಗೆ ನಾವು, ಬಾಲಕರು, ಮಾತಾಡುತ್ತಿದ್ದ ಕನ್ನಡದಲ್ಲೇ ನಡೆಸುತ್ತಿದ್ದರು.

ನಗಿಸಿ ನಗಿಸಿ, ನಲಿಸಿ ನಲಿಸಿ ಕಲಿಸುವ ವಿಧಾನ ಅವರದು.

ಈಗಲೂ ಚೆನ್ನಾಗಿ ನೆನಪಿದೆ ನನಗೆ.

1971 ಡಿಸೆಂಬರ್ 4ನೆಯ ತಾರೀಖು, ಶನಿವಾರ ಬೆಳಿಗ್ಗೆ ಸ್ಕೂಲು, ಅರ್ಧ ದಿನ, ಮೊದಲನೆಯ ಪೀರಿಯಡ್.

ನರಸಣ್ಣನವರು ಕ್ಲಾಸಿಗೆ ಬಂದರು. ಆಗಿನ್ನೂ ನಾನು ಹೈಸ್ಕೂಲ್ ಸೇರಿ ಆರು ತಿಂಗಳಾಗಿತ್ತಷ್ಟೇ. ಅಷ್ಟರಲ್ಲಿ ಅವರು ನಮ್ಮ ಮನಸ್ಸನ್ನು ಚೆನ್ನಾಗಿಯೇ ಸೆಳೆದಿದ್ದರು. ಕ್ಲಾಸಿನೊಳಗೆ ಕಾಲಿಟ್ಟವರೆ, ''ಇವತ್ತು, ಐದು ನಿಮಿಷ ವರ್ಲ್ಡ್ ನ್ಯೂಸ್'' (ಅಂತರಾಷ್ಟ್ರೀಯ ಸುದ್ದಿಗಳು) ಅಂತ ಘೋಷಿಸಿದರು. ಪಠ್ಯಪುಸ್ತಕ ಅಲ್ಲದಿದ್ದರೆ ಏನಾದರೂ ಮಾಡಲಿ, ನಾವೆಲ್ಲರೂ ತಯಾರು. ಬೇಗ ಬೇಗನೆ ಪುಸ್ತಕಗಳನ್ನು ಮುಚ್ಚಿ ಬದಿಗಿಟ್ಟು ಕಿವಿ ಕಣ್ಣು ತೆರೆದು ಬಾಯಿ ಮುಚ್ಚಿ ಅವರನ್ನೇ ನೋಡುತ್ತಾ ಕುಳಿತೆವು. 80 ಹುಡುಗರು.



ದಿ|| ಶ್ರೀ ಬಿ. ನರಸಣ್ಣ
(1920-1987)

ಸುತ್ತ-ಮುತ್ತ ನೋಡಿದರು. ಒಂದು ಮ್ಯಾಪ್ (ನಕ್ಷೆ) ಗತಿಯಿಲ್ಲ! ಹಾಗಿದ್ದರೂ ತಾನೆ 80 ಜನ ಮಕ್ಕಳಿಗೆ ತಿಳಿಯಾಗಿ ಹೇಗೆ ಕಾಣಿಸೀತು? ಚಿಂತೆಯಿಲ್ಲ! ನರಸಣ್ಣನವರು ಬೋರ್ಡಿಗೆ ಹೋದರು, ಸರಸರ ಅಳಿಸಿದರು. ಒಂದು ತುಂಡು ಚಾಕ್‌ಪೀಸು ತೆಗೆದುಕೊಂಡರು. ಮನೋವೇಗದಲ್ಲಿ ಪ್ರಪಂಚದ ಖಂಡಗಳ ನಕ್ಷೆಯನ್ನು ಸುಂದರವಾಗಿ ಬರೆದರು. ನಾವೆಲ್ಲರೂ ''ಆ'' ಅಂತ ಬಾಯಿ ಬಿಟ್ಟುಕೊಂಡು ಆಶ್ಚರ್ಯದಿಂದ ನೋಡಿದೆವು. ಕ್ಲಾಸೆಲ್ಲಾ ನಿಶಬ್ಧ!

ಹಿಂದಿನ ಸಂಜೆ, ಪಾಕಿಸ್ತಾನಕ್ಕೂ ಭಾರತಕ್ಕೂ ನಡುವೆ ಯುದ್ಧ ಪ್ರಾರಂಭವಾಗಿತ್ತು. ಅದರ ಆಗುಹೋಗುಗಳನ್ನು ವರ್ಣಿಸ ತೊಡಗಿದರು ನರಸಣ್ಣನವರು. ಪಾತ್ರಧಾರಿಗಳ ವ್ಯಂಗ್ಯ ಮುಖಚಿತ್ರಗಳನ್ನು ಬರೆದರು. ಪ್ರತಿಯೊಬ್ಬ ಪಾತ್ರಧಾರಿಯ ಡಯಲಾಗ್‌ಗಳನ್ನು ಮಕ್ಕಳಾಡುವ ಕನ್ನಡದಲ್ಲಿ ನುಡಿದರು.

ಇಂದಿರಾ ಗಾಂಧಿ ಮತ್ತು ರಿಚರ್ಡ್ ನಿಕ್ಸನ್, ಉದ್ದ ಮೂಗುಗಳನ್ನು ಮುಟ್ಟುವಂತೆ... ಒಬ್ಬರನ್ನೊಬ್ಬರು ನೋಡಿ ಸಿಡುಕುತ್ತಿದ್ದರು. (ಪೂರ್ವ ಪಾಕಿಸ್ತಾನಕ್ಕೆ ಪಶ್ಚಿಮ ಪಾಕಿಸ್ತನದ ಆಡಳಿತಾಧ್ಯಕ್ಷ) ''ಟಿಕ್ಕಾ ಖಾನ್, ಪೀಕಿಂಗ್(ಈಗ ಬೆಯ್ಜಿಂಗ್)ಗೆ ಹೋಗಿ, ಚೂ ಎನ್ ಲಾಯ್ ಅನ್ನ ನೋಡಿ, ಮುಖ ಎಲ್ಲ ಪರ್ಚಿಕೊಂಡ. ಹಾ ಹೂ ಅಂತ ಕೂಗಾಡಿ ಕುಣಿದಾಡಿದ... ಚೂ ಓಹೋ ಹಾಗೋ, ಸರಿ, ನೋಡೋಣ ನೀನ್ ಈಗ ಬಿಡುಗಾಡಿ ಅಂತ ವಾಪಸ್ಸು ಕಳಿಸಿದ..''

''ಐದು ನಿಮಿಷ'' ಅಂತ ಶುರುವಾದದ್ದು, ಪೂರ್ತಿ ಪೀರಿಯಡ್ ಆಗಿ, ಹತ್ತು ನಿಮಿಷ ಹೆಚ್ಚಾಗಿಯೇ ಆಗಿತ್ತು.

ಪ್ರತಿದಿನ ಅಂದಿನ ಪತ್ರಿಕೆಗಳಲ್ಲಿ ಬಂದ ವರದಿಗಳನ್ನು, ಅವರದೇ ಆದ ಶೈಲಿಯಲ್ಲಿ ವ್ಯಂಗ್ಯ ಮತ್ತು ವ್ಯಾಖ್ಯಾನದೊಂದಿಗೆ ನಮಗೆ ಕಣ್ಣಮುಂದೆ ತಂದು ನಿಲ್ಲಿಸುವರು. ಅದೇ ಡಿಸೆಂಬರ್ 16ರಂದು, ಪೂರ್ವ ಪಾಕಿಸ್ತಾನದ ಸೇನೆ ಸಂಪೂರ್ಣವಾಗಿ ಭಾರತದ ಸೇನೆಗೆ ಶರಣಾಗಿಬಿಟ್ಟಿತು. ಯುದ್ಧ ಮುಗಿದಿತ್ತು. ಮಾರನೆಯ ದಿನವೇ ಪುನಃ ಪಠ್ಯಪುಸ್ತಕವನ್ನ ಕ್ಲಾಸಿನಲ್ಲಿ ತೆರೆದದ್ದು.

ಆ ದಿನಗಳಲ್ಲಿ ನನ್ನಲ್ಲಿ ಅನೇಕ ಬದಲಾವಣೆಗಳು ಪ್ರಾರಂಭಿಸಿದುವು. ನಿತ್ಯವೂ ವಾರ್ತಾಪತ್ರಿಕೆಗಳನ್ನು ಓದುವ ಅಭ್ಯಾಸವನ್ನು ನಾನು ಅವರ ಈ ''ವರ್ಲ್ಡ್‌ನ್ಯೂಸ್'' ಕ್ಲಾಸುಗಳಿಂದಲೇ ಆರಂಭಿಸಿದ್ದು. ಅಂದಿನ ವಾರ್ತೆಗಳನ್ನು ಭೂಗೋಳಶಾಸ್ತ್ರಕ್ಕೂ ಚರಿತ್ರೆಗೂ ಪೋಣಿಸುವುದನ್ನು ಆಗಲೇ ನಾನು ಮೊದಲ ಬಾರಿಗೆ ಕಲಿತದ್ದು. ಸಮಾಜ ವಿಜ್ಞಾನವನ್ನು ಕಲಿಯಲೂ ಕಲಿಸಲೂ ಕಥೆಗಳು ಎಷ್ಟು ಮುಖ್ಯ ಎಂಬುದನ್ನು ಕಲಿತಿದ್ದೂ ಆಗಲೇ. ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಕುತೂಹಲ, ಆಸಕ್ತಿ ಹುಟ್ಟಿ ಬೇರೂರಿದ್ದೂ ಆಗಲೇ. ಎಂದೋ ಒಂದು ದಿನ ನಾನೂ ಉಪಾಧ್ಯಾಯನಾಗಬೇಕು ಎಂಬ ಯೋಚನೆಯೂ ಆಗಲೇ ಮನಸ್ಸಿನಲ್ಲಿ ಎಲ್ಲೋ ಹುಟ್ಟಿಕೊಂಡಿದ್ದು.

ಆದರೆ ಅವು ನನಗೆ ತಿಳಿಯಾಗಿ ಗೋಚರವಾಗಲು ಪ್ರಾರಂಭವಾದದ್ದು ಸುಮಾರು 30 ವರ್ಷಗಳ ನಂತರವೇ!

ಈಗ ಭೂಗೋಳಶಾಸ್ತ್ರದಲ್ಲೊ ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲೊ ಮಕ್ಕಳಿಗೂ ಸಹೃದಯರಾದ ಉಪಾಧ್ಯಾಯರಿಗೂ ಇತರರಿಗೂ ನಾನು ಕಾರ್ಯಾಗಾರಗಳನ್ನ ಉಪನ್ಯಾಸಗಳನ್ನ ಹಾಗೂ ತರಬೇತಿಗಳನ್ನ ನಡೆಸುವಾಗ ಯಾವುದೋ ಒಂದು ಘಟ್ಟ ದಾಟಿದ ಕೂಡಲೆ ನನ್ನ ಗುರುಗಳ ಸೌಮ್ಯವಾದ ಅನುಗ್ರಹ ಅತಿ ತಿಳಿಯಾಗಿ ಮನದಟ್ಟುತ್ತದೆ.

ಅನಂತರ ಆ ಕಾರ್ಯಕ್ರಮ ಅವರದೇ. ಚೆನ್ನಾಗಿದ್ದರೂ ಅವರದೇ, ಇಲ್ಲದಿದ್ದರೂ ಅವರದೇ.

ಹಾಂ! ಅವರು ಬಿಡಿಸುತ್ತಿದ್ದರಲ್ಲ ಪ್ರಪಂಚದ ಖಂಡಗಳ ನಕ್ಷೆ? ಎರಡನೆಯ ದಿನದಿಂದ ಕೈಗಡಿಯಾರ ನಾವು ಕೈಯಲ್ಲಿ ಇಟ್ಟುಕೊಂಡು ಎಷ್ಟು ಹೊತ್ತಾಗತ್ತೆ ಆ ನಕ್ಷೆಯನ್ನ ಅವರು ಬಿಡಿಸಲು ಅಂತ ನೋಡುತ್ತಿದ್ದೆವು.

ಅವರ ದಾಖಲೆ?

ಒಂದು ನಿಮಿಷ ನಲವತ್ತು ಸೆಕಂಡುಗಳು!

ತ್ಯಾಗರಾಜರು ರಾಮನನ್ನು ಕೇಳುತ್ತಾರೆ, ''ದಾಶರಥೆ! ನೀ ಋಣಮು ತೀರ್ಪ ತರಮಾ?'' ಎಂದು. (''ದಾಶರಥೆ! ನಿನ್ನ ಋಣವನ್ನು ತೀರಿಸಲು ಸಾಧ್ಯವೇ?'')

ಇದೇ ಪ್ರಶ್ನೆಯನ್ನ ನಮ್ಮ ಪ್ರತಿಯೊಬ್ಬ ಗುರುವನ್ನೂ ನಾವು ಕೇಳಬಹುದಲ್ಲವೆ?

**ಲೇಖಕರ ಸಂಪರ್ಕ http://tiigs.org**

---

## ಸೀರೆ ಉಟ್ಟಾಗ

**ಸಚಿನ್‌ಗೆ ಮಾರ್ಕೆಟ್‌ನಲ್ಲಿ ಅಡ್ಡಾಡಲು ಆಸೆಯಾಯಿತು. ಆದರೆ ಜನ ಮುತ್ತಿಗೆ ಹಾಕಿಕೊಳ್ಳುತ್ತಾರೆಂಬ ಭಯ. ಹೀಗೇ ಯೋಚನೆ ಮಾಡುತ್ತಾ ಇದ್ದಾಗ ಒಂದು ಐಡಿಯಾ ಹೊಳೆಯಿತು. ಹೆಂಗಸಿನ ಹಾಗೆ ವೇಷ ಧರಿಸಿ ಹೋದರೆ? ಹೆಂಡತಿಯ ಸೀರೆ ಉಟ್ಟುಕೊಂಡು ಹೋಗಿ ಆರಾಮವಾಗಿ ಅಡ್ಡಾಡಿದರು. ಯಾರೂ ಗುರುತು ಹಿಡಿಯಲಿಲ್ಲ. ಸ್ವಲ್ಪ ಸಮಯದ ನಂತರ ಒಬ್ಬ ಹೆಂಗಸು ಇವರನ್ನು ನೋಡಿ ಮುಗುಳ್ನಕ್ಕರು. ನಂತರ ಇವರ ಬಳಿ ಬಂದು ಕಣ್ಣು ಮಿಟುಕಿಸಿ 'ಹಾಯ್ ಸಚಿನ್' ಎಂದಾಗ ಇವರು ತಬ್ಬಿಬ್ಬು. 'ಅರೆ! ನಿಮಗೆ ಹೇಗೆ ತಿಳಿಯಿತು ನಾನು ಸಚಿನ್ ಎಂದು' ಇವರು ಕೇಳಿದಾಗ ಆಕೆ 'ಅರೆ, ತುಂಬಾ ಸುಲಭ. ಏಕೆಂದರೆ ನಾನು ಧೋನಿ' ಎಂದರು.**

ಹುರುಳಿ ಕಟ್ಟು...

# ಹುಟ್ಟಿದ ಊರು......

**- ಎಚ್. ಗೋಪಾಲಕೃಷ್ಣ**

**ನ**ಮ್ಮ ಮೂವತ್ತು ವರ್ಷ ಹಳೆಯ ಮನೆಯ ನವೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಲು ಯೋಜಿಸಿದ್ದೆ ಮತ್ತು ಐಡಿಯಾ ಡ್ರಾಪೂ ಮಾಡಿದ್ದೆ. ಇದಕ್ಕೆ ಕಾರಣ: ಮೊದಲನೆಯ ಮನೆ ಕಟ್ಟಿದ ನಂತರ ನಾನೂ ಒಬ್ಬ ಮನೆಕಟ್ಟುವ ಎಕ್ಸ್‌ಪರ್ಟ್ ಆಗಿ ನನ್ನ ಸ್ವಂತದವರ ಕೆಲವು ಮನೆಗಳನ್ನು ಕಟ್ಟಿಸಿದ್ದೆ. ಪ್ರತಿ ಮನೆ ಪೂರೈಸಿದಾಗಲೂ ನೆಮ್ಮದಿ ಕಳೆದುಕೊಂಡು ಒದ್ದಾಡಿದ್ದೆ - ಯಾಕಾದರೂ ಈ ಕೆಲಸಗಳನ್ನು ಒಪ್ಪಿಕೊಳ್ಳುತ್ತೇನೆಯೋ ಎಂದು ಅನಿಸುವ ಮಟ್ಟಿಗೆ ರೋಸಿ ಹೋಗುತ್ತಿತ್ತು. ಇದಕ್ಕೆ ಮುಖ್ಯ ಕಾರಣ ಎಂದರೆ ನನಗೂ ಮನೆ ಕಟ್ಟುವ ಕಂಟ್ರಾಕ್ಟರಿಗೂ ಉಂಟಾಗುತ್ತಿದ್ದ ಜಟಾಪಟಿ. ಮೊದಮೊದಲು ಬಾಂಧವ್ಯ ಚೆನ್ನಾಗಿಯೇ ನಡೆದುಕೊಂಡು ಬರುತ್ತಿದ್ದರೂ ಮನೆ ಮುಗಿಯುತ್ತಾ ಬಂದ ಹಾಗೆ ನಾನೂ ಕಂಟ್ರಾಕ್ಟರೂ ಬದ್ಧ ವೈರಿಗಳಾಗಿಬಿಡುತ್ತಿದ್ದೆವು. ಅವನು ಕೇಳಿದಷ್ಟು ಹಣ ನಾನುಕೊಡೆ, ಅವನು ಬಿಡ.. ಅವನು ಮಾಡಿರುವ ಯಾವ ಕೆಲಸದಲ್ಲೂ ನನಗೆ ತೃಪ್ತಿಯಿಲ್ಲ; ನಾನು ತರುವ ಯಾವ ಸಾಮಾಗ್ರಿ ಬಗ್ಗೆಯೂ ಅವನಿಗೆ ಒಲವಿಲ್ಲ. ನಾನೂ ಏತಿ ಎಂದು ಹೇಳುವುದಕ್ಕೆಲ್ಲಾ ಅವನದ್ದು ಪ್ರೇತಿ ಮನೋಭಾವ. ಹೀಗಾಗಿ ಒಟ್ಟಾರೆಯಾಗಿ ನನಗೆ ಮನೆ ನಿರ್ಮಾಣದವರ ಬಗ್ಗೆಯೇ ಒಂದು ರೀತಿಯ ಅಸಹ್ಯ ಭಾವನೆ ಹುಟ್ಟಿಬಿಟ್ಟಿತ್ತು.

ಮನೆ ನಿರ್ಮಾಣದವರೆಲ್ಲರೂ ಕಳ್ಳರು, ಸುಳ್ಳರು ಮತ್ತು ಭ್ರಷ್ಟರು ಎನ್ನುವ ನಂಬಿಕೆ ತಲೆಯಲ್ಲಿ ಕೂತುಬಿಟ್ಟಿತ್ತು!

ಈ ಮನೋಭಾವನೆಯ ಹಿನ್ನೆಲೆಯಲ್ಲಿಯೇ ಇನ್ನು ಮುಂದೆ ಇಂಥಹವರ ಸಹವಾಸವೇ ಬೇಡ ಅಂತ ತೀರ್ಮಾನಿಸಿಬಿಟ್ಟಿದ್ದೆ - ಆದರೆ ಹಣೆಬರಹ ಅಂತ ಒಂದು ಇದೆಯಂತೆ ನೋಡಿ ಅದು ನೀವು ಇಷ್ಟ ಪಡದೇ ಇರುವುದನ್ನೇ ನೀವು ಮಾಡುವ ಹಾಗೆ ಮಾಡುತ್ತದಂತೆ!

ಮೂವತ್ತು ವರ್ಷದ ಹಿಂದೆ ನಾನು ಕಟ್ಟಿದ್ದ ಮನೆಗೆ ಕೊಂಚ ರಿಪೇರಿ ಕೆಲಸ ಹಾಗೂ ವಿಸ್ತರಣೆಯಾಗಲೇ ಬೇಕಿತ್ತು. ಅದು ಹೇಗೋ ದಿನ ತಳ್ಳಿಕೊಂಡು ಬಂದೆ. ಆದರೆ ಇನ್ನು ದಿನ ತಳ್ಳೂಕ್ಕೆ ಆಗುಲ್ಲ ಅಂತ ಮನವರಿಕೆಯಾಗಿದ್ದು ರಿಟೈರಾದ ಮೇಲೆ. ಬೇರೆ ದಾರಿಯೇ ಇಲ್ಲದೆ ಮನೆಕಟ್ಟುವವರ ಹುಡುಕಾಟಕ್ಕೆ ಇಳಿದೆ. ನನ್ನ ಮನೆಕೆಲಸ ಮಾಡಿದ್ದ ಹಳಬರು ಯಾರನ್ನೂ ಮತ್ತೆ ಕೂಗಬಾರದು ಅನ್ನುವ ಹಠ ಹುಟ್ಟಿತ್ತು. ನಿನಗೆ ಸೂಟ್ ಆಗುವ ಒಬ್ಬ ನನಗೆ ಗೊತ್ತು, ಅವನನ್ನ ನಿನ್ನ ಹತ್ತಿರ ಕಳಿಸ್ತೀನಿ ಅಂತ ನನ್ನ ಬಂಧುವೊಬ್ಬರು ಈ ಹೊಸಬನನ್ನ ಕಳಿಸಿದರು.

ಹೊಸಬ ಬಂದ - ಹೇಳೀಕೇಳೀ ನೆರೆರಾಜ್ಯದವನು - ನನಗೆ ಈ ಮುನ್ನ ಪರಿಚಯದವರೂ ಅಲ್ಲಿನವನೇ.... ಹಠಮಾರಿಗಳು ಮತ್ತು ಜಗಳಗಂಟರು - ಮತ್ತೆ ಇದೇ ಗುಂಪಿನಾತನೇ ಬಂದನೇ ಅನಿಸಿತು. ಮೊದಲೇ ತೀರ್ಮಾನಕ್ಕೆ ಬರಬೇಡ ಅಂತ ವಿವೇಕ ಎಚ್ಚರ ಎಚ್ಚರ ಅಂದಿತು. ಮಾತುಕತೆಗೆ ಕೂತೆವು. ನಾನು ಮಾಡಿಸಬೇಕಿದ್ದ ಕೆಲಸಗಳ ವಿವರ

ತೆಗೆದುಕೊಂಡ ಅವನ ರೇಟು ಹೇಳಿದ. ಮಾರನೇ ವಾರ ಕೆಲಸವನ್ನೂ ಶುರು ಮಾಡಿದ. ಕೆಲಸ ನಿಧಾನ ಅನ್ನುವುದನ್ನು ಬಿಟ್ಟರೆ ಹೇಳಿದ ಕೆಲಸ ಚೆನ್ನಾಗೇ ಮಾಡಿದ ಮತ್ತು ಆಶ್ಚರ್ಯ ಅಂದರೆ ಒಂದೇ ಒಂದು ದಿವಸ ಜಗಳ ಕದನ ಏನೂ ಇಲ್ಲದೇ ಇದ್ದ. ನೀವು ಚೆನ್ನಾಗಿ ರೇಗಿರಿ, ಬೈಯಿರಿ – ಅವನದ್ದು ಬರೇ ಒಂದೇ ಉತ್ತರ – ಆಗಲಿ ಸಾರ್.... ಅಷ್ಟೇ. ಇವನ ಕೆಲಸದ ನಡುವೆಯೇ ಅವನೂರಿನಲ್ಲಿ ಚುನಾವಣೆ ಬಂತು. ಒಂದೂವರೆ ತಿಂಗಳು ಇವನು ಗೈರು! ಎಲೆಕ್ಷನ್ನು ಸಾರ್, ಇಲ್ಲೀಗೇ ಹುಡುಕಿ ಕೊಂಡು ಬಂದು ಒಬ್ಬೊಬ್ಬರಿಗೆ ಎರಡು ಸಾವಿರ ಕೊಟ್ಟಿದ್ದಾರೆ. ಹೋಗಿ ವೋಟು ಹಾಕಲೇ ಬೇಕು ಅನ್ನುವ ಕಾರಣ! ಅವನ ಊರಿನಿಂದ ಒಂದು ಗ್ಯಾಂಗನ್ನೇ (ಎಲ್ಲರೂ ಇವನ ಹತ್ತಿರದ ನಂಟರು) ಕರೆದುಕೊಂಡು ಬಂದು ಇಲ್ಲಿ ಅವರಿಗೆ ಕೆಲಸ ಒದಗಿಸುವವನು ಇವನು. ಮನೆ ಮುಗೀತಾ ಬಂದ ಹಾಗೆ ಬಹಳ ಹತ್ತಿರದವನೂ ಆಗಿಬಿಟ್ಟ. ನಿಮ್ಮೋರೆಲ್ಲಾ ಜಗಳಗಂಟರು ಅದು ಹೇಗಯ್ಯಾ ನೀನು ಮಾತ್ರಾ ಜಗಳವೇ ಆಡುಲ್ಲಾ ಅಂತ ಒಂದು ಸಲ ರೇಗಿದೆ.

ಸಾರ್, ನಾನು ಇಲ್ಲೇ ಹುಟ್ಟಿ ಬೆಳೆದದ್ದು ಹೆಸರು ಮಾತ್ರಾ ಅಲ್ಲೀದು. ಇಲ್ಲಿಯದೂ ವೋಟು ಐತೆ, ಅಲ್ಲೀದೂ ಐತೆ....

ಒಂದು ದಿವಸ ಯಾಕೋ ಬೇಜಾರಿನಲ್ಲಿದ್ದ ಅಂತ ಏನು ಸಮಾಚಾರ ಅಂತ ವಿಚಾರಿಸಿದೆ.

ಇನ್ಮೇಲೆ ನಮ್ಮೂರಿಂದ ಯಾರೂ ಇಲ್ಲೀಗೆ ಕೆಲಸಕ್ಕೆ ಬರುಲ್ಲ ಅಂದ!

ಬೆಂಗಳೂರು ನಮಗೇ ಸೇರಬೇಕು ಅನ್ನುವ ಸ್ಕೂಲ್ ಆಫ್ ಥಿಂಕಿಂಗು ನನ್ನದು. ಇವರು ಯಾರೂ ಬರದೇ ಹೋದರೆ ನಮ್ಮೂರು ನಮಗೇ ಇರುತ್ತೆ ಅಂತ ಖುಷಿಯಾಯಿತು.

ಏಕಪ್ಪಾ ಏನಾಯಿತು? ಅಂದೆ.

ನಮ್ಮ ಏರಿಯಾದಲ್ಲೂ ಫಾರಿನ್ ಕಂಪನಿ ಬಂದಿವೆ, ಅವರೂ ಬಿಲ್ಡಿಂಗುಗಳನ್ನ ಕಟ್ತಾ ಅವರೆ. ನಮ್ಮ ಕೆಲಸದವರೆಲ್ಲರೂ ಇನ್ಮೇಲೆ ಅಲ್ಲೀಗೆ ಹೋಗಿಬಿಡ್ತಾರೆ..... ಅಂದ!

ಒಳೊಳಗೆ ಖುಷಿಯಾದರೂ ಅವನ ನೋವಿನಲ್ಲಿ ಭಾಗಿಯಾಗಿಲ್ಲ ಅಂದರೆ ನಾನು ಮನುಷ್ಯನೇ?

ಹೆದರಬೇಡ, ಹೀಗೆ ಸುಮಾರು ವರ್ಷದಿಂದಲೇ ಹೇಳ್ತಿದ್ದಾರೆ, ಅದು ಆಗದ ಹೋಗದ ಕೆಲಸ ಅಂತ ಸಮಾಧಾನಿಸಿದೆ.

ನನಗೇನಿಲ್ಲಾ ಸಾರ್ ನಮ್ಮವರು ಯಾರೂ ಇಲ್ಲೀಗೆ ಬರಲ್ಲ ಅಂದರೆ ನಾವು ಅಲ್ಲೀಗೆ ಹೋಗಬೇಕು, ಇಲ್ಲ ಅವರ ಸಂಬಂಧ ಕಳಕೊಳ್ಳಬೇಕು – ಅದೇ ಚಿಂತೆ – ಅಂದ.

ನೀನೇ ಊರಿಗೆ ಹೋಗಿ ಸೇರ್ಕೋ..... ಅಂದೆ.

ಸಾರ್ ಇದು ನಾನು ಹುಟ್ಟಿದ ಊರು ಬಿಡುಕ್ಕೆ ಆಗುತ್ಯಾ? ಅಂದ.

ಹುಟ್ಟಿದ ಊರಿನ ವ್ಯಾಮೋಹ ಅವನಿಗಿರುವಷ್ಟು ನಮಗಿಲ್ಲವೇ ಅಂತ ಆ ಕ್ಷಣಕ್ಕೆ ಅನಿಸಿಬಿಟ್ಟಿತು! ಊರಿನ ವ್ಯಾಮೋಹ ಕಟ್ಟಿಕೊಂಡರೆ ಬೆಳೆಯುಕ್ಕೆ ಆಗುತ್ತಾ? ನಮ್ಮ ಮೇಸ್ತ್ರಿಯನ್ನೇ ಕೇಳಬೇಕು......!

✵

Mass ಭವಿಷ್ಯ

# ಸೆಪ್ಟೆಂಬರ್ 2011

**- ಜ್ಯೋತಿಷಿ ಸತ್ಯೋತ್ತಮಾಚಾರ್ಯ**

**ಮಾಸ ಸೂಕ್ತಿ :** (ನನ್ನಂತಹ) ಪ್ರಸಿದ್ಧ ಜ್ಯೋತಿಷಿಗೂ ಕಷ್ಟಗಳಿವೆ; ನಿಜ ಹೇಳಿದರೂ ದೊಣ್ಣೆ ಏಟು, ಸುಳ್ಳು ಹೇಳಿದರೂ ಕಲ್ಲೇಟು ತಪ್ಪಿದ್ದಲ್ಲ! ಸ್ವರಕ್ಷಣೆಗೆ ಕೆಲವರು ಕಂಪ್ಯೂಟರ್ ಮೂಲಕ ಭವಿಷ್ಯ ಹೇಳುತ್ತಾರೆ. ಆದರೆ ಅದಕ್ಕೆ ಕಂಪ್ಯೂಟರ್ ಪ್ರತಿಕ್ರಿಯೆ: ''ನಾಳೆ ನನ್ನ ಹಾರ್ಡ್ ಡಿಸ್ಕಿಗೆ ವೈರಸ್ ಬಡಿದರೆ ನನ್ನ ಭವಿಷ್ಯದ ಗತಿ?'' ಹಾಗಾಗಿ ಬಂದದ್ದೆಲ್ಲಾ ಎದುರಿಸುವ ಧೈರ್ಯವನ್ನು ದೇವರು ನಿಮಗೆ ದಯಪಾಲಿಸಲಿ.

**ಮೇಷ :** ಕ್ಷಮಿಸಿ ಮೇಷಗಳೇ, ಸೆಪ್ಟೆಂಬರ್ ನಿಮಗೆ ತೊಂದರೆಯ ಮಾಸವಾಗಲಿದೆ, ನೀವೇನಾದರೂ ರಾಜಕೀಯದಲ್ಲಿದ್ದರಂತೂ ಎಲ್ಲವೂ ಅದಲು ಬದಲಾಗಲಿದೆ, ಖಾದಿ ಕಾವಿಯಾಗಿ, ಕಾವಿ ಖಾದಿಯಾಗಲಿದೆ. ಮಾಸದ ಎರಡನೇ ಭಾಗದಲ್ಲಿ ಪ್ರೇಮಿಗಳಿಗೆ ಸ್ವಲ್ಪ ಅನುಕೂಲ ಕಾಣಿಸುತ್ತದೆ. ಆದರೂ ಪ್ರೇಮ ಗೀತೆಗಳನ್ನು ಹೇಳುವಾಗ ನಿಮ್ಮಿಬ್ಬರ ಮಧ್ಯ ಒಂದು ಮರವಿದ್ದರೆ (ನಮ್ಮ ಕಾಲದ ಸಿನಿಮಾದಲ್ಲಿರಲಿಲ್ಲವೇ? ಹಾಗೆ) ಉತ್ತಮ.

**ವೃಷಭ :** ಸೂರ್ಯ, ಬುಧ ನಿಮ್ಮ ರಕ್ಷಣೆಯಲ್ಲಿದ್ದರೂ ಆರೋಗ್ಯದ ಕಡೆ ಗಮನವಿರಲಿ, ಗಣೇಶನ ಹಬ್ಬದಂದು ಭಕ್ಷ್ಯಗಳನ್ನು ಹೆಚ್ಚಾಗಿ ಕಬಳಿಸಬೇಡಿ. ಕೆಲಸ ಹುಡುಕುತ್ತಿರುವವರಿಗೆ ಲಂಚ ಕೊಡದೆಯೇ ನೌಕರಿ ಸಿಗುವುದು ಅನುಮಾನ. ಹೊಸ ಲೋಕಪಾಲರು ಹೇಗಿದ್ದಾರೆ ಅಂತ ವಿಶ್ಲೇಷಿಸಿ, ನಂತರ ಲಂಚ ಕೊಡುವ ಕಾರ್ಯಕ್ಕಿಳಿಯಿರಿ. ಬೀಗರಿಂದ ಕಷ್ಟಗಳಿವೆ. ಅವರು ಬರುವ ದಿನ ನಿಮ್ಮ ಮನೆಗೆ ''ಬೀಗ'' ಬಡಿದರೆ ಉತ್ತಮ.

**ಮಿಥುನ :** ಆಹಾ! ಇದೊಂದು ಒಳ್ಳೆಯ ಮಾಸ ನಿಮಗೆ! ಇರುವ ಸಾಲವನ್ನೆಲ್ಲಾ ತೀರಿಸಿ ಹೊಸ ಸಾಲಕ್ಕೆ ಕೈಹಾಕಿ - ದೇವರ ಆಶೀರ್ವಾದ ಇದೆ. ಸರ್ಕಾರದೊಡನೆ ಒಪ್ಪಂದಗಳಿಗೆ ಇದು ಒಳ್ಳೆಯ ಕಾಲ - ಪರ್ಮಿಟ್‌ಗಳಲ್ಲದೆಯೇ ನಿಮಗೆ ಅಭ್ಯುದಯವಾಗಲಿದೆ. ಸದುಪಯೋಗ ಮಾಡಿಕೊಳ್ಳಿ. ಕಳ್ಳರಿಂದ ಹುಷಾರ್! ನಿಮ್ಮ ಲ್ಯಾಪ್ ಟಾಪ್ ನಿಮಗರಿವಿಲ್ಲದೆಯೇ ಬೆಂಗಳೂರಿನ ಗುಜರಿಯ ಕಡೆ ಪ್ರಯಾಣ ಮಾಡಲಿದೆ. ನಿಮ್ಮ ಮನೆಗೆ ಬರುವವರ ಚಪ್ಪಲಿಗಳು ವರಾಂಡದಲ್ಲೇ ಮಾಯವಾಗುವ ಸೂಚನೆಗಳಿವೆ.

**ಕಟಕ :** ರಾಹು ಕೇತುಗಳು ನಿಮಗೆ ಮುಳ್ಳು ಚುಚ್ಚುತ್ತಲೇ ಇರುತ್ತಾರೆ, ತಾಯಂದರಿಗೆ ಮಕ್ಕಳ ಮೇಲೆ ಗಮನ ತೀವ್ರವಾಗಿ ಕಮ್ಮಿಯಾಗಿ ಮಕ್ಕಳು ಸಂತೋಷದಿಂದ ಇರುತ್ತಾರೆ.

ಭಾಷಣಕಾರರಿಗೆ ಉತ್ತಮ ಸಮಯ. ಸಭಾಂಗಣದಲ್ಲಿ ಶ್ರೋತೃಗಳು ಇಲ್ಲದಿದ್ದರೂ ನಿಮ್ಮ ಪ್ರತಿಧ್ವನಿಯಂತೂ ಗ್ಯಾರಂಟಿಯಾಗಿ ಕೇಳುವಿರಿ. ಹೋಟೆಲ್ ಉದ್ಯಮದವರಿಗೆ ಲಾಭವಿದೆ. ಉದ್ದಿನ ವಡೆಯ ಹೊರ ಅಳತೆ ಬದಲಾಯಿಸದೇ ಒಳ ಅಳತೆ ಜಾಸ್ತಿ ಮಾಡಿದರೂ ನಡೆಯುತ್ತೆ.

**ಸಿಂಹ :** ನಿಮ್ಮ ಅಧಿಪತಿ ಸೂರ್ಯ. ಆದರೆ ಈ ಮಾಸ ಮೋಡ ಕವಿದಿರುವುದರಿಂದ ಅವನ ದರ್ಶನವಂತೂ ನಿಮಗಿಲ್ಲ. ಆದರೂ ಕೃಷಿಗಾರರಿಗೆ ಎಸ್ಟೇಟ್ ಮಾಲೀಕರಿಗೆ ಒಳ್ಳೆಯ ಮಳೆಯಿಂದ ಫಲ ಲಭ್ಯ. ಈ ತಿಂಗಳು ನೀವು ಸುಖ ಸಂತೋಷವನ್ನು ಕಾಣುತ್ತೀರಿ. ಗಂಡನಿಂದ ಹೆಂಡತಿಗೆ, ಹೆಂಡತಿಯಿಂದ ಗಂಡನಿಗೆ ಶಾಂತಿ ದೊರಕಲಿದೆ. (ಗ್ರಹ ಗತಿ ಅಂತಾರಲ್ಲ, ಇದೇ ಅಲ್ಲವೇ?)

**ಕನ್ಯಾ :** ಹ್ಯಾಪಿ ಬರ್ತ್‌ಡೇ ''ಕನ್ಯಾ''ಮಣಿಗಳೇ! ಈ ತಿಂಗಳು ನೀವು ಕೈಗೊಳ್ಳುವ ಕಾರ್ಯಕ್ಕೆಲ್ಲಾ ಜಯವಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಓದಿದ್ದೆಲ್ಲಾ ತಲೆಯ ಒಳಗೆ ಹೋಗೋದು ಮಾತ್ರವಲ್ಲ ಎಲ್ಲವೂ ಅರ್ಥವಾಗುತ್ತೆ! ನಿಮಗೆ ಈ ವರ್ಷ ದಕ್ಕುವ ಅಂಕಪಟ್ಟಿ, ಡಿಗ್ರಿ ಸರ್ಟಿಫಿಕೇಟು ಇನ್ಯಾರದೋ ಆಗಿರದೆ ಸ್ವತಃ ತಮ್ಮದೇ ಆಗಿರುತ್ತೆ ! ವೈಜ್ಞಾನಿಕ ಮನೋಭಾವದವರು ಸಂಶೋಧನೆಗೆ ಇಳಿಯಬಹುದು. (ಮನೆಯ ನೀರಿನ ಮೀಟರ್ ಯಾಕೆ ಸುತ್ತುತ್ತಲೇ ಇದೆ? ಪಕ್ಕದ ಮಾನೆಯಾಕೆ ಸಣ್ಣಗೆ ಆಗುತ್ತಿರುವಾಗ ನನ್ನ ಹೆಂಡತಿ ಯಾಕೆ ದಪ್ಪ ಆಗುತ್ತಿದ್ದಾಳೆ? – ಹೀಗೆ) ಬರ್ತ್‌ಡೇ ದಿನ ಎಲ್ಲಾ ಕ್ಯಾಂಡಲ್‌ಗಳನ್ನೂ ಉಫ್! ಮಾಡಬೇಡಿ – ನಿಮ್ಮ ಮನೆಯಲ್ಲಿ ಪವರ್ ಕಟ್ ಕಾದಿದೆ.

**ತುಲಾ :** ನಿಮಗೂ ಹ್ಯಾಪಿ ಬರ್ತ್‌ಡೇ ತುಲಾಗಳೇ! ಮಾಸದ ಮೊದಲಿನಲ್ಲಿ ಮಾಧ್ಯಮದ ವೃತ್ತಿಯಲ್ಲಿರುವವರಿಗೆ ಒಳ್ಳೆಯ ಕಾಲ ಕಾದಿದೆ. ಆದರೆ ಎರಡನೇ ಭಾಗದಲ್ಲಿ ಹುಷಾರ್! ನಿಮ್ಮ ಮೂಳೆಗಳಿಗೂ, ಕಿಡ್ನಿಗಳಿಗೂ ಗಂಡಾಂತರ ಕಾದಿದೆ. ಬಾಳೆದಿಂಡಿನ ಜ್ಯೂಸ್ ಬಾಟಲ್ ಹತ್ತಿರವಿದ್ದರೆ ಒಳಿತು – ಕಿಡ್ನಿ ಕಲ್ಲುಗಳಿಗೆ ಅದು ಶತ್ರು.

**ವೃಶ್ಚಿಕ :** ಮಂಗಳ ನಿಮ್ಮನ್ನು ಕಾಪಾಡುತ್ತಿದ್ದಾನೆ. ಆದರೂ ಹುಡುಗಿಯರೇ ಎಚ್ಚರಿಕೆ! ನಾಲಾಯಕ್ಕು ಹುಡುಗರ ವಶಕ್ಕೆ ಬೀಳುತ್ತೀರಿ. ನೂತನ ವಧುವರರಿಗೆ ಮಧುಚಂದ್ರದ ಪ್ರಯಾಣಗಳು ಆಹ್ಲಾದಕರವಾಗಿ ತೋರಿದರೂ, ಪ್ರಯಾಣದ ಟಿಕೆಟ್‌ಗಳು ಹಾಗೂ ಪ್ರವಾಸ ಧಾಮಗಳಲ್ಲಿ ಕಾದಿರಿಸುವ ವ್ಯವಸ್ಥೆಗಳು ಅಲ್ಲೋಲಕಲ್ಲೋಲವಾಗಲಿದೆ. ಇದರಿಂದ ಬೇಸತ್ತು ನಿಮ್ಮಿಬ್ಬರಲ್ಲೇ ಜಗಳವಾಡಬೇಡಿ. ಅದಕ್ಕೆ ಆ ಮೇಲೆ ಕೊನೆಯವರೆಗೂ ಸಮಯ ಇದ್ದೇ ಇದೆ!

**ಧನಸ್ಸು :** ಪರವಾಗಿಲ್ಲ, ''ಗುರು''ವಿನ ರಕ್ಷಣೆಯೇನೋ ಇದೆ, ಚಿಕ್ಕ ಮಕ್ಕಳಿಗೆ ತಾಯಂದಿರ ಆರೈಕೆ ಹೆಚ್ಚಲಿದ್ದು ಅದು ಅಜೀರ್ಣಕ್ಕೆ ತಿರುಗಿದರೂ ತಿರುಗೀತು. ವಾಕಿಂಗ್, ಈಟಿಂಗ್ ಮತ್ತು ಮೆಡಿಟೇಶನ್ ಎಂಬ ಮೂರು ಹವ್ಯಾಸಗಳು ನಿಮ್ಮನ್ನು ಕಾಡಲಿವೆ. ಅವುಗಳಿಗೆ ತುತ್ತಾಗಿ ಸದಾ ತೂಕದ ಮೆಷಿನ್ ಮೇಲೆ ನಿಮ್ಮ ತೂಕವೆಷ್ಟು ಎಂದು ಕಾಲವನ್ನು ವ್ಯರ್ಥ ಮಾಡದಿರಿ. ಹಾಯಾಗಿ ಟೀವಿ ನೋಡಿಕೊಂಡು ಅನಂತ ಪದ್ಮನಾಭನಾಗಿರಿ!

**ಮಕರ :** ಶನಿಯ ಪ್ರಭಾವದಲ್ಲಿದ್ದೀರಿ, ಜೋಕೆ! ನಿಮ್ಮ ಆಫೀಸಿನಲ್ಲಿ, ಮನೆಯಲ್ಲಿ ತಿಂಗಳು ಪೂರ ಜಗಳಗಾಳಗಲಿವೆ. ಹಾರುವ ಸಾಮಾನುಗಳಾದ ಫೈಲ್‌ಗಳು, ಸ್ಟೇಪ್ಲರ್‌ಗಳು, ಪೇಪರ್ ಶೀಟ್‌ಗಳು, ಪಾತ್ರೆ ಲೋಟಗಳು ಇವೆಲ್ಲವನ್ನೂ ಯಾವುದಾದರೂ ರೂಮಿ ನೊಳಗಿಟ್ಟು ಬೀಗ ಬಡಿಯಿರಿ. ಗಂಡ ಹೆಂಡತಿಯರಿಬ್ಬರೂ ಮಕರ ರಾಶಿಯವರೇ ಆಗಿದ್ದರೆ ರಾತ್ರಿ ಮಲಗುವ ಮುನ್ನ ತಲೆಗೆ ಹೆಲ್ಮೆಟ್ ಹಾಗೂ ಮೈಗೆ ಜಾಕೇಟ್ ಹಾಕಿಕೊಂಡು ಮಲಗಿದರೆ ಕ್ಷೇಮ.


**ಕುಂಭ :** ಶನಿ ಮತ್ತು ಶುಕ್ರ ನಿಮ್ಮೊಡನೆ ಈ ತಿಂಗಳು ''ಸ್ವಪಕ್ಷ''ಗಳಾಗಿ ಇದ್ದರೂ, ನಿಮಗೆ ತೊಂದರೆಗಳು ತಪ್ಪಿಲ್ಲ. ನಗುನಗುತ್ತಾ ನಿಮ್ಮ ಕೈಕುಲುಕುವ ಮಿತ್ರರೇ ನಿಮ್ಮ ಕಾಲೆಳೆಯುತ್ತಿರುತ್ತಾರೆ. ಬ್ಯಾಲೆನ್ಸ್ ತಪ್ಪಿ ಬೀಳಬೇಡಿ! ಕುಂಭಗಳೇ ನೀವೇನಾದರೂ ರಾಜಕಾರಣಿಗಳಾಗಿದ್ದರೆ ಈ ತಿಂಗಳು ಊರುಬಿಟ್ಟು ಊಟಿಗೋ ಕೊಡೈಕೆನಾಲ್‌ಗೋ ಹೋಗಿ ಇದ್ದರೆ ಉತ್ತಮ. ಕುಂಭಗಳಿಗೆ ''ರಾಜ'' ''ರಾಣಿ'' ಯೋಗಗಳಿವೆ. ಹಾಗಾಗಿ ನಾಗರಾಜಗಳಿಂದ ಹಾವರಾಣಿಗಳಿಂದ ದೂರವಿರಿ. ನಿಮಗೆ ಕಚ್ಚಿ ಅವಕ್ಕೆ ಹಿಂಸೆಯಾದೀತು!

**ಮೀನ :** ವಸತಿ ಮತ್ತು ಭೂಮಿಯ ಮೇಲೆ ಬಂಡವಾಳ ಹಾಕುವುದಕ್ಕೆ ಇದು ಅತ್ಯುತ್ತಮ ಸಮಯ. ದಂಪತಿಗಳು ಸಂಬಂಧಿಗಳೊಡನೆ ಒಂದು ''ಟ್ರಸ್ಟ್'' ನೋಂದಾಯಿಸಿಕೊಂಡು ಸರ್ಕಾರದಿಂದ ಒಂದು ರೂಪಾಯಿಗೆ ಒಂದು ಎಕರೆ ಬೆಲೆಯಲ್ಲಿ ಭೂಮಿ ಗಿಟ್ಟಿಸಿಕೊಳ್ಳುವ ಅದೃಷ್ಟ ನಿಮಗಿದೆ. ನಂತರ ಅದನ್ನು ಮಾಮೂಲಿ ಬೆಲೆಯಲ್ಲಿ ಮಾರಿ ಕೋಟ್ಯಾಧೀಶರಾಗಿ. ನಿಮ್ಮ ಆರೋಗ್ಯಕ್ಕೆ ಅಷ್ಟು ಒಳ್ಳೆಯ ಸಮಯವಲ್ಲ, ಡಾಕ್ಟರುಗಳಿಂದ ದೂರವಿರಿ.

ಒಟ್ಟಿನಲ್ಲಿ ಓದುಗರೇ, ನಿಮ್ಮಿಂದಾಗುವ ವಿಘ್ನಗಳನ್ನೆಲ್ಲಾ ನಿವಾರಣೆ ಮಾಡಲು ಈ ತಿಂಗಳು ವಿನಾಯಕನ ಚತುರ್ಥಿ ನಡಿಸಿದ್ದೀರಿ. ಪಾಪ, ಆ ಪುಣ್ಯಾತ್ಮನಿಗೂ ಸ್ವಲ್ಪ ಶಾಂತಿ ಸಿಗಲಿ!

✵

---




**ನಿಮ್ಮ ಮಗು ತುಂಬಾ ಚೆನ್ನಾಗಿ ಬೆಳೀತಿದೆ. ಅದಕ್ಕೊಂದು ಈಮೇಲ್ ಕಳಿಸಿ ಬೇಕಿದ್ದರೆ.**

# ಭೀಮನ ಅಮಾಸೆ ಮಹಾತ್ಮೆ

**- ನಾಗೇಶ ಹೆಗಡೆ**

**ರಾ**ಷ್ಟ್ರಪತಿ ಪ್ರತಿಭಾ ದೇವಿ ಸಿಂಗ್ ಪಾಟೀಲ್ ಇಂಡೊನೇಶ್ಯ ಕಡೆ ಪ್ರವಾಸ ಹೋಗಿದ್ದರು. ಸೋನಿಯಾ ಗಾಂಧಿಯವರು ಬಾಂಗ್ಲಾದೇಶಕ್ಕೆ ಹೋಗಿದ್ದರು. ಅಲ್ಲಿನ ಪ್ರಧಾನಿ ಶೇಖ್ ಹಸೀನಾರ ಆಹ್ವಾನದ ಮೇರೆಗೆ ಇಂದಿರಾಗಾಂಧಿಯವರಿಗೆ ನೀಡಲಾದ ಮರಣೋತ್ತರ ಪ್ರಶಸ್ತಿ ''ಸ್ವಾಧೀನತಾ ಸಮ್ಮಾನನ'' ಪ್ರಶಸ್ತಿಯನ್ನು ಸ್ವೀಕರಿಸಲೆಂದು ಢಾಕಾದಲ್ಲಿದ್ದರು. ಅದೇ ವೇಳೆಗೆ ಲೋಕಸಭಾ ಸ್ಪೀಕರ್ ಮೀರಾ ಕುಮಾರ್ ಕೇರಳದ ದೇವರ ಸ್ವಂತ ದೇಶಕ್ಕೆ ಬಂದಿದ್ದರು. ಆಲಿಂಡಿಯಾ ರೇಡಿಯೊ ವರದಿಯ ಪ್ರಕಾರ ದಿಲ್ಲಿಯ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಕೂಡ ರಾಜಧಾನಿಯನ್ನು ಬಿಟ್ಟು ಪಕ್ಕದ ಹರ್ಯಾಣದ ಸೂರಜ್ ಕುಂಡ್‌ನ ಯಾವುದೋ ಸಮ್ಮೇಳನ ಉದ್ಘಾಟನೆಗೆ ಹೋಗಿದ್ದರು. ದಿಲ್ಲಿಯಲ್ಲಿ ಎಲ್ಲ ಮಹಿಳಾ ಶಕ್ತಿಕೇಂದ್ರಗಳು ಹೀಗೆ ಏಕಕಾಲಕ್ಕೆ ಖಾಲಿಯಾಗಿದ್ದು ನನಗೋ ಒಂಥರಾ ಎದೆ ಡವಡವ.

''ಪಂಚಕನ್ಯಾ ಸ್ಮರೇ ನಿತ್ಯಂ ಮಹಾ ಪಾತಕ ನಾಶನಂ'' ಎಂಬ ಮಾತು ನೆನಪಿಗೆ ಬಂತು. ಈ ಐವರೂ ಹೀಗೆ ಈ ಮಳೆಗಾಲದಲ್ಲಿ ದಿಲ್ಲಿಯನ್ನು ನಡುನೀರಲ್ಲಿ ಬಿಟ್ಟರೆ ಏನಪ್ಪಾ ಗತಿ ಎಂದು ಚಿಂತಿಸುತ್ತ ನಾನು ತೋಟದಲ್ಲಿ ಪಾರಿಜಾತ ಗಿಡಕ್ಕೆ ಗೂಟ ಕೊಟ್ಟು ನೇರವಾಗಿ ನಿಲ್ಲಿಸಲು ಯತ್ನಿಸುತ್ತಿದ್ದೆ. ನಿನ್ನೆ ರಾತ್ರಿ ಮಳೆ ಜೋರಾಗಿ ಬಿದ್ದುದರಿಂದ ಅದು ನೆಲ ಕಚ್ಚಿತ್ತು. ಗೂಟ ಕೊಟ್ಟಷ್ಟೂ ಗೂಟವೇ ಹಸಿಮಣ್ಣಿನಲ್ಲಿ ಬಾಗಿ ಬೀಳುತ್ತಿತ್ತು. ಅಷ್ಟರಲ್ಲಿ ಗೇಟ್ ಸದ್ದಾಯಿತು.

ಪಕ್ಕದ ಹಳ್ಳಿಯ ಮೂವರು ಮಹಿಳಾಮಣಿಗಳು ಗೇಟ್ ಬಳಿ ಹಾಜರಾಗಿದ್ದರು. ಎಲ್ಲರೂ ಸ್ತ್ರೀಶಕ್ತಿ/ ಸ್ವಸಹಾಯ ಸಂಘದ ಪದಾಧಿಕಾರಿಗಳು. 'ನಿಮ್ಮಿಂದ ಒಂದು ಸಹಾಯ ಆಗಬೇಕಿತ್ತು ಸಾರ್' ಎನ್ನುತ್ತ ಮುನಿ ಹನುಮಕ್ಕ ಗೇಟ್ ತೆಗೆದು ಸೀದಾ ವರಾಂಡಾ ಕಡೆ ಬಂದಳು. ಒಳಕ್ಕೆ ಬರಲು ಹಿಂಜರಿಯುತ್ತಿದ್ದ ಇನ್ನಿಬ್ಬರು ಹಿಂಬಾಲಕಿಯರಿಗೆ 'ರೀ ಬನ್ರೇ, ಅದೇನ್ ತ್ವಾಳಾಕಂಡ್ ಮ್ಯಾಕೀ ನಿಂತ್ಕಂಣಾಂಗೆ ನಿಂತ್ಕಂಡೀರಿ' ಎಂದು ಕೂಗಿ ದಪದಪ ಹೆಜ್ಜೆ ಹಾಕುತ್ತ ಬಂದಳು. ಅವಳ ಗತ್ತು ಗೈರತ್ತು ನೋಡಿ, ಕಾಫಿ ಕೂಡ ಕಂಕಿಮ್ ಅನ್ನದೆ ಬಾಲ ಅಲ್ಲಾಡಿಸುತ್ತ ಫಾಲೋ ಮಾಡಿತು. ವರಾಂಡ ಏರಿ ಕಟ್ಟೆ ಮೇಲೆ ಕೂತವಳೇ ಆಕೆ ಹಳದಿ ಬಣ್ಣದ ಕರಪತ್ರವೊಂದನ್ನು ಬಿಡಿಸಿ ಎದುರು ಹಿಡಿದು 'ನೋಡ್ರೀ' ಎಂದಳು. ನೋಡಿದೆ. 'ಯಾರ್ ಕೊಟ್ರು ನಿಮಗೆ' ಕೇಳಿದೆ.

'ಈ ಸುಸೀಲ ಸಿಟೀಗೆ ವೋಗಿದ್ಲು ಬಾಮೈದನ್ ನೋಡಕ್ಕೆ.... ಅವರ ಮನೆಗೆ ನಿಮ್ ಪೇಪರ್ ಬತ್ತೈತಲ ಪ್ರಜಾವಾಣಿ? ಅದರ್ ವಳಕ್ಕೆ ಮಡಗಿದ್ರು, ಹಂಗೇ ಎತ್ಕಂಡ್ ಬಂದೌಳೆ

ಸುಸೀಲ. ವಸಿ ನೋಡಿ... ನಮ್ಗೂ ಏನಾರೆ ಯೆಲ್ಪ್ ಆಗಂಗಿದ್ರೆ ಮಾಡಿ' ಎಂದು ಆಜ್ಞಾಪಿಸಿದಳು. ಮತ್ತೆ ನೋಡಿದೆ.

ಹತ್ತಾರು ಕಾಗುಣಿತ ದೋಷಗಳಿರುವ ಆ ಪಾಂಪ್ಲೆಟ್‌ನ ಸಾರಾಂಶ ಇಷ್ಟೆ : ಮಹಿಳಾ ಉದ್ಯಮಿಗಳಿಗೆ ಅಪೂರ್ವ ಅವಕಾಶ! ಮನೆಯಲ್ಲೇ ಪೇಪರ್ ಪ್ಲೇಟ್ ತಯಾರಿಸುವ ಯಂತ್ರವನ್ನು ರಿಯಾಯ್ತಿ ಬೆಲೆಯಲ್ಲಿ ನಾವು ನೀಡುತ್ತಿದ್ದೇವೆ. ಪ್ಲೇಟ್‌ಗಳನ್ನು ಮಾಡುವ ತರಬೇತಿಯನ್ನೂ ಕೊಡುತ್ತೇವೆ. ಪ್ಲೇಟ್ ಮಾಡಲು ಬೇಕಾದ ಅಲ್ಯೂಮಿನಿಯಂ ಲೇಪಿತ ಹಾಳೆಗಳನ್ನೂ ನಾವೇ ಒದಗಿಸುತ್ತೇವೆ. ನಿಮ್ಮ ಮನೆಗೆ ವಾರಕ್ಕೊಮ್ಮೆ ನಾವೇ ಬಂದು ನೀವು ತಯಾರಿಸಿದ ಪ್ಲೇಟ್‌ಗಳನ್ನೆಲ್ಲ ಖರೀದಿಸುತ್ತೇವೆ. ಯಂತ್ರವನ್ನು ಇಂದೇ ಬುಕಿಂಗ್ ಮಾಡಿ.... ತ್ವರೆ ಮಾಡಿ.

'ಇದೆಲ್ಲ ಸಿಟಿಯಲ್ಲಿರೋ ಮಹಿಳೆಯರಿಗೇ ಸರಿ. ಹಳ್ಳಿಯ ಜನಕ್ಕೆ ಬೇಕಾಗೋ ವಸ್ತುಗಳನ್ನು ನೀವು ಈ ಹಳ್ಳಿಯಲ್ಲಿ ತಯಾರು ಮಾಡಬೇಕು' ಎಂದು ಹೇಳಿದೆ.

'ಏನ್ ಮಾಡ್‌ಬೋದು ನೀವೇ ಹೇಳಿ' ಎಂದಳು ಸುಶೀಲಮ್ಮ.

ಒಂದು ನಿಮಿಷ ಯೋಚಿಸಿದಾಗ ನನ್ನ ತಪ್ಪು ಅರಿವಾಯಿತು. ಈ ಹಳ್ಳಿಯ ಜನರಿಗೆ ಹಳ್ಳಿಯ ಯಾವ ವಸ್ತುಗಳೂ ಬೇಕಾಗಿಲ್ಲ. ಎಲ್ಲವೂ ನಗರದ್ದೇ ಬೇಕು. ಎರೆಗೊಬ್ಬರ ಬೇಡ. ನಗರದಿಂದ ಬರುವ ಯೂರಿಯಾ, ಡಿಎಪಿ ಬೇಕು. ನಾರು ಹಗ್ಗ ಬೇಡ; ಪ್ಲಾಸ್ಟಿಕ್ ರೋಪ್ ಬೇಕು. ಹಾಗೆ ನೋಡಿದರೆ ಹಗ್ಗವೇ ಬೇಕಾಗಿಲ್ಲ, ಬಾವಿಗಳೂ ಇಲ್ಲ; ಹೋರಿಗಳೂ ಇಲ್ಲವಲ್ಲ! ಇನ್ನು ಹಪ್ಪಳ ಸಂಡಿಗೆ ಬೇಡ. ಹಳದಿ ಕೊಳವೆಯಂಥ ಅದೇನೋ ಬೋಟಿ ಬೇಕು. ಸೀಗೆಪುಡಿ ಬೇಡ. ಶಾಂಪೂ ಸ್ಯಾಶೆ ಬೇಕು. ಇನ್ನು ನೆಲ್ಲಿಕಾಯಿ ಜಾಮ್ ಅಥವಾ ಹುಣಿಸೆಹಣ್ಣನ್ನು ಒಣಪುಡಿಯನ್ನಾಗಿ ಮಾಡುವ ಯಂತ್ರದ ಸಲಹೆ ಕೊಡೋಣ ಎಂದರೆ ನೆಲ್ಲಿ, ಹುಣಿಸೆ ಮರಗಳನ್ನೆಲ್ಲ ಎಂದೋ ಕಡಿದು ಹಬ್ಬ ಮಾಡಿಯಾಗಿದೆ.

'ಅದೆಲ್ಲ ಹೇಳೋಕೆ ಬರ್‌ಬ್ಯಾಡಿ; ನಾವೇ ಹುಡೀಕ್ಕಂಡ್ ವೋಗಿದ್ವಿ. ಆ ಮಿಶನ್ ಮಾರೋ ಅಂಗಡೀ ತಾವ' ಎನ್ನುತ್ತ ಮುನಿ ಹನುಮಕ್ಕ ಇನ್ನೊಂದು ಉದ್ದನ್ನ ಕಾಗದ ತೆಗೆದಳು. ಅದು ಇಂಗ್ಲಿಷ್‌ನಲ್ಲಿತ್ತು. ಮತ್ತದೇ ಕಾಗುಣಿತ, ವ್ಯಾಕರಣ ದೋಷಗಳು. 36 ಸಾವಿರ ರೂಪಾಯಿಗೆ ಯಂತ್ರವನ್ನು ಖರೀದಿಸುವ ಒಪ್ಪಂದದ ಕರಾರು ಪತ್ರ. ಅದರ ಮೇಲೆ ಒಮ್ಮೆ ಕಣ್ಣಾಡಿಸಿ,

'ಇದು ಬ್ಲೇಡ್ ಕಂಪನಿ' ಎಂದೆ.

'ಬ್ಲೇಡ್ ಅಲ್ಲಾರೀ!' ಮೂವರೂ ಮಹಿಳೆಯರು ಕೋರಸ್‌ನಲ್ಲಿ ಹೇಳಿದರು. 'ನಾವು ನೋಡ್ಕಂಬಂದೀವಿ. ಪ್ಲೇಟ್ ಮಾಡೋ ಯಂತ್ರಾನೇ ನಿಜ ಕಣ್ರೀ, ಬ್ಲೇಡ್ ಅಲ್ಲ' ಹನುಮಕ್ಕ ಕಾಲಲ್ಲಿ ಒತ್ತಿ ಒತ್ತಿ ಹೇಳಿದಳು. ನಾನು ಅವಳ ಕಾಲನ್ನು ನೋಡಿದೆ. ಅವಳು ಮತ್ತೊಮ್ಮೆ ಕಾಲನ್ನು ನೆಲಕ್ಕೆ ಒತ್ತಿ ಕೈಯಿಂದ ಒಂದು ಲಿವರ್ ಜಗ್ಗುವಂತೆ ಹಾವಭಾವ ತೋರಿಸಿ, ಯಂತ್ರದ

ವಿವರಣೆ ಕೊಟ್ಟಳು. ತಾನೇ ಸ್ವತಃ ನಾಲ್ಕಾರು ಪೇಪರ್ ಪ್ಲೇಟ್ ಮಾಡಿದ್ದನ್ನು ವಿವರಿಸಿದಳು. ಎರಡು ಸ್ಯಾಂಪಲ್‌ಗಳನ್ನೂ ತೋರಿಸಿದಳು.

ಬ್ಲೇಡ್ ಕಂಪನಿಗಳ ಬಗ್ಗೆ ವಿವರಿಸಿ ಹೇಳಬೇಕಾಯಿತು. ಈ ಕರಾರು ಪತ್ರದಲ್ಲಿ ಯಂತ್ರಗಳ ಅಡ್ವಾನ್ಸ್ ಬುಕಿಂಗ್ ಮತ್ತು ಖರೀದಿಯ ನಿಯಮ ಇದೆಯೇ ವಿನಾ ನೀವು ತಯಾರಿಸಿದ ಪ್ಲೇಟ್‌ಗಳನ್ನು ಅವರು ಖರೀದಿಸುವ ಬಗ್ಗೆ ಪ್ರಸ್ತಾಪವೇ ಇಲ್ಲ ಎಂದೆ. 'ಅದೆಲ್ಲ ಇಂಗ್ಲೀಸ್‌ನಲ್ಲೈತೆ. ನಮಗೆ ಗೊತ್ತಾಗೋದ್ ಹೆಂಗೆ? ಅದ್ಕೇ ನಿಮ್ಮ ತಾವ ಬಂದ್ವಿ. ನೀವೇ ವಸಿ ಸಿಟಿಗೆ ಹೋಗಿ ಮಾತಾಡ್ಕಂಬನ್ನಿ. ನಮಗೆ ಈ ಮಿಶನ್ ಬೇಕು' ಎಂದು ಆಜ್ಞಾಪಿಸಿ ಹೊರಟೇ ಬಿಟ್ಟಳು.

ಗ್ರಾಮೀಣ ಮಹಿಳೆಯರ ಉದ್ಯಮಶೀಲತೆಯ ಬಗ್ಗೆ ನಾನು ಹಿಂದೊಮ್ಮೆ ಹಳ್ಳಿಯಲ್ಲಿ ಭಾಷಣ ಬಿಗಿದ ತಪ್ಪಿಗೆ ಈ ಹೊಣೆಯನ್ನು ಹೊತ್ತುಕೊಂಡೆ. ಆ ಕಂಪನಿಯ ಹೆಡ್ಡಾಫೀಸಿಗೆ ಫೋನ್ ಮಾಡಿದೆ. ಕನ್ನಡ ಬಾರದ ಮಹಿಳೆಯೊಬ್ಬಳು ಹಲ್ಲೋ ಎಂದಳು. 'ಯಂತ್ರವನ್ನು ಬುಕಿಂಗ್ ಮಾಡಬೇಕಿತ್ತು, ಆದರೆ ನಿಮ್ಮ ಅಗ್ರೀಮೆಂಟ್‌ನಲ್ಲಿ ಪೇಪರ್ ಪ್ಲೇಟ್‌ಗಳನ್ನು ಖರೀದಿ ಮಾಡುವ ವಿಚಾರವೇ ಇಲ್ಲವಲ್ಲ' ಎಂದೆ. ಆಕೆಗೆ ಕೋಪ ಬಂತೆಂದು ಕಾಣುತ್ತದೆ. 'ಇದು ಗಂಡಸರಿಗೆ ಅಲ್ಲ, ನಿಮ್ಮ ಮನೆಯವರನ್ನು ಕಳಿಸಿ. ತುಂಬಾ ಲೇಡೀಸು ಅಡ್ವಾನ್ಸ್ ಬುಕಿಂಗ್ ಮಾಡಿದಾರೆ. ಅವರಿಗೆ ಬಾರದ ಸಂಶಯ ನಿಮಗೆ ಹೇಗೆ ಬಂತು?' ಎಂದು ಹೇಳಿ ಫೋನ್ ಇಟ್ಟಳು.

ಅದಾಗಿ ಮುಂದಿನ ಹತ್ತು ದಿನಗಳವರೆಗೆ ನನಗೂ 'ಮಹಿಳಾ ಸೊಸಾಯ' ಗುಂಪಿಗೂ ಚಿಕ್ಕ ಘರ್ಷಣೆ ನಡೆಯುತ್ತಲೇ ಇತ್ತು. ಅದು 'ಮೋಸದ ಕಂಪನಿ' ಎಂದು ನಾನು ಹೇಳುವುದು; 'ನೀವು ಅಡ್‌ಗಾಲ್ ಹಾಕ್‌ಬೇಡಿ, ಲೇಡೀಸು ಏನಾದರೂ ಮಾಡೋಕೊಂಟ್ರೆ ಎಲ್ರೂ ಬೇಡಾಂತೀರ' ಎನ್ನುತ್ತ ಹಣ ಹೊಂದಿಸಲು ಅತ್ತ ಇತ್ತ ಮಹಿಳಾಮಣಿಗಳು ಓಡಾಡಿದರು. ಮುನಿ ಹನುಮಕ್ಕನ ತಲೆತುಂಬ ಪೇಪರ್ ಪ್ಲೇಟ್ ಕನಸುಗಳೇ ತುಂಬಿದ್ದವು. ಯಂತ್ರ ಬರುತ್ತದೆ; ಅದಕ್ಕೊಂದು ಸಿಮೆಂಟ್ ಕಟ್ಟೆ ಕಟ್ಟಿಸಬೇಕು, ಕರೆಂಟ್ ತಂತಿ ಹಾಕಿಸಬೇಕು. ಪಂಚಾಯ್ತಿ ಅಧ್ಯಕ್ಷೆಯನ್ನು ಕರೆಸಿ ಉದ್ಘಾಟನೆಗೆ ಕರೆಸಬೇಕು... ಅಂದು ಬಂದವರಿಗೆಲ್ಲ ಹೊಸ ಪೇಪರ್ ಪ್ಲೇಟ್‌ನಲ್ಲೇ ಸಿಹಿ ಹಂಚಬೇಕು ಎಂದೆಲ್ಲ ಸಿದ್ಧತೆ ನಡೆಯುತ್ತಿದ್ದವು.

ಮೊನ್ನೆ ಹನುಮಕ್ಕ ಕೈಯಲ್ಲಿ ಸಿಹಿ ಹಿಡಿದೇ ಗೇಟ್ ಬಳಿ ಬಂದಳು. 'ಮಶಿನ್ ಬಂತೇನವ್ವಾ?' ಕೇಳಿದೆ. 'ನೀವ್ ತಮಾಸೆ ಮಾಡ್‌ಬೇಡಿ' ಎನ್ನುತ್ತ ನಡೆದ ಕತೆ ಹೇಳಿದಳು. ಹಣ ಕಟ್ಟಲೆಂದು ಹೋದರೆ ಕಂಪನಿ ಆಫೀಸಿನ ಬಾಗಿಲು ಮುಚ್ಚಿತ್ತಂತೆ. 'ಮಿಶನ್ ಮಾರೋ ಆ ಯಮ್ಮ ಒಂದ್ ವಾರದಿಂದ ಬಂದಿಲ್ವಂತೆ... ಬೋಲ್ಡೂ ಕಿತ್ಕೊಂಡ್ ಹೋಗವ್ರೆ. ಅಡ್ವಾನ್ಸ್ ಕೊಟ್ಟವರೆಲ್ಲ ಅಂಗಡಿ ತಾವ ಬಂದು ಬಂದು ಹೋಗ್ತವ್ರೆ' ಎಂದು ಬಡಬಡ ಹೇಳಿದಳು. ನಂತರ ಸಿಹಿ ಕೊಟ್ಟು

'ನಾಲಕ್ಕು ಲೋಳೆಸರ ಗಿಡಾ ಕೊಡಿ; ಎಲೆ ಬೇಡ, ಗಿಡಾನೇ ಬೇಕು' ಎಂದಳು.

'ಯಾಕಮ್ಮಾ?' ಕೇಳಿದೆ.

'ಇವೊತ್ತು ಭೀಮನ ಅಮಾಸೆ ಅಲ್ಲವ್ರಾ? ಗಂಡನ ಹೆಸರು ಹೇಳಿ ಬಾಗಿಲ ಮೇಲೆ ತೂಗುಹಾಕಿದ್ರೆ ವಳ್ಳೇದಂತೆ' ಎಂದಳು. ಪರವಾಗಿಲ್ಲ ಗಂಡಸರ ಮೇಲೆ ನಂಬಿಕೆ ಬಂದಂತಿದೆ ಎಂದುಕೊಂಡೆ.

'ಲೋಳೆಸರ ಕೊಡ್ತೀನಿ; ಅದರ ಜತೆ ಮುತ್ತುಗದ ಸಸಿಯನ್ನೂ ಒಂದೆರಡು ಕೊಡಲಾ?' ಕೇಳಿದೆ. ಅದೇಕೆಂದು ಗೊತ್ತಾಗದೆ ಆಕೆ ಮಿಕಮಿಕ ನೋಡಿದಳು.

'ಮುತ್ತುಗದ ಮರ ಇದ್ರೆ ಲೇಡೀಸಿಗೆ ಒಳ್ಳೇದು. ಹಿಂದಿನ ಕಾಲದಲ್ಲಿ ಮುತ್ತುಗದ ಎಲೆಯನ್ನೇ ಜೋಡಿಸಿ ಪ್ಲೇಟ್ ಮಾಡಿ ಹಳ್ಳಿಯ ಹೆಂಗಸರು ನಾಲ್ಕಾರು ಕಾಸು ಮಾಡಿಕೊಳ್ಳೋರು' ಎಂದೆ.

ಮುನಿ ಹನುಮಕ್ಕ ಹುಸಿ ಮುನಿಸಿನಿಂದಲೇ ಮುಸಿಮುಸಿ ನಕ್ಕಳು.

✵

---

## ಓದುಗರ ಗಮನಕ್ಕೆ

* ಅಪರಂಜಿ ಚಂದಾ ವಿವರ ಬೇಕೆ?
* ಪತ್ರಿಕೆ ತಲುಪದ ವಿಚಾರ ನಮಗೆ ತಿಳಿಸಬೇಕಿದೆಯೆ?
* ನಮ್ಮ ಪತ್ರಿಕೆಗೆ ಲೇಖನ ಬರೆಯಲಿದ್ದೀರಾ?

ಇಂತಹ ವಿಷಯಗಳ ಬಗ್ಗೆ ಉಪಸಂಪಾದಕರೊಂದಿಗೆ ದೂರವಾಣಿ ಮಾಡಲು ಬಯಸುತ್ತೀರಾ? ಸಂತೋಷ. ಆದರೆ ಬೆಳಗ್ಗೆ 7.00 ರಿಂದ 8.30 ಸಮಯದಲ್ಲಿ ಮಾತ್ರ ಕರೆ ಮಾಡಲು ವಿನಂತಿ. ಉಳಿದ ಸಮಯ ಅವರ ಇತರ ಕೆಲಸಗಳಿಗೆ ಮೀಸಲಾಗಿರುತ್ತದೆ ಎಂಬುದು ನಿಮ್ಮ ನೆನಪಿನಲ್ಲಿರಲಿ.

**ಹಾಗೆಯೇ ಗಮನಿಸಿ**: ನೀವು ದೂರವಾಣಿ ಮಾಡಿದಾಗ ನಿಮ್ಮ ಕರೆಯನ್ನು ಯಾರು ಸ್ವೀಕರಿಸಿದರೂ, ಅವರೊಂದಿಗೆ ನೇರವಾಗಿ ಮಾತಿಗಿಳಿಯದೆ 'ಉಪಸಂಪಾದಕರು ಇದ್ದಾರೆಯೆ?' ಎಂದು ವಿಚಾರಿಸಿ, ಅವರೊಂದಿಗೆ ಮಾತ್ರ ಮಾತನಾಡುವುದು ಸೂಕ್ತ. ಅವರು ಸಿಗದಿದ್ದರೆ ಅವರು ಲಭ್ಯವಿರುವ ಸಮಯ ತಿಳಿದುಕೊಂಡು ನಂತರ ಕರೆ ಮಾಡಬಹುದು.

ಇದಕ್ಕಿಂತಲೂ ಒಂದು ಸರಳ ವಿಧಾನವಿದೆ. ನಿಮಗೆ ಬೇಕಾದ ಮಾಹಿತಿ ಕೋರಿ ಒಂದು ರಿಪ್ಲೈ ಕಾರ್ಡ್ ಬರೆಯಿರಿ. ಲಿಖಿತ ಉತ್ತರ ಸಿಗುತ್ತದೆ. ಅಂದಹಾಗೆ ನಿಮ್ಮ ವಿಳಾಸ, ಚಂದಾ ಸಂಖ್ಯೆ ತಿಳಿಸಲು ಮರೆಯದಿರಿ! ದಯವಿಟ್ಟು ಸಹಕರಿಸಿ.

– ಸಂಪಾದಕರು

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಳ

- ನಿಮ್ಮ ಮೇಲೆ 24 ತಾಸು ನಿಗಾ ಇಡಬಲ್ಲ ವ್ಯಕ್ತಿ ಎಂದರೆ ನೀವೇ.
- ನನ್ನ ಬಳಿ ಇಬ್ಬರು ಡಾಕ್ಟರ್‌ಗಳಿದ್ದಾರೆ – ಬಲಗಾಲು ಮತ್ತು ಎಡಗಾಲು.
- ಇತರ ಅನೇಕ ನಕ್ಷತ್ರಗಳು ತನ್ನಂತೆ ಖ್ಯಾತಿ ಪಡೆಯಲು ಹಂಬಲಿಸುತ್ತಿವೆ ಎಂದು ಸೂರ್ಯನಿಗೆ ಗೊತ್ತಾಗುವುದೇ ಇಲ್ಲ.
- It will be necessary to change the law if it has become an ass.
- ಪುಸ್ತಕವನ್ನು ತೂಕಕ್ಕೆ ಹಾಕಬಹುದು ಲೇಖಕನನ್ನಲ್ಲ.
- ಕೆಟ್ಟ ಹವಾಮಾನ ಎಂಬುದು ಇಲ್ಲ. ಇರುವುದು ಬೇರೆ ಬೇರೆ ರೀತಿಯ ಹವಾಮಾನ.
- ಹೆಂಡತಿಯ ಜನ್ಮ ದಿನ ನಿನ್ನೆ ಆಗಿತ್ತು ಎಂದು ನಿಮಗೆ ಹೇಳುವುದನ್ನೇ ನೆನಪು ಎಂದು ಕರೆಯುತ್ತಾರೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಐ ಲವ್ ಲಂಡನ್ ಎಂದು ಬರೆದಿರುವ ಕಪ್ ಸಾಸರ್‌ಗಳ ಅಡಿಯಲ್ಲಿ ಮೇಡ್ ಇನ್ ಚೀನಾ ಎಂಬ ಬರಹ!
- Some are born small; some shrink into smallness; some have smallness thrust on them.
- ಮಿದುಳು ಒಂದು ಸರಳ ತತ್ವದ ಮೇಲೆ ಕಾರ್ಯವೆಸಗುತ್ತದೆ – ಬಳಸಿ ಅಥವಾ ಕಳೆದುಕೊಳ್ಳಿ.
- ಹಿಟ್ಟೂ ನಿನ್ನದೆ, ತವವೂ ನಿನ್ನದೆ ಕೆಡದಿರಲಿ ರೊಟ್ಟಿ ಎಂದೂ ಹಾಡಬಹುದೆ?
- ಅತ್ಯುತ್ತಮ ವೈದ್ಯರು ಇವರು ಎಂಬುದನ್ನು ಯಾರೂ ನಿರಾಕರಿಸುವಂತಿಲ್ಲ – ಬಿಸಿಲು, ನೀರು, ವಿಶ್ರಾಂತಿ, ವ್ಯಾಯಾಮ ಮತ್ತು ಆಹಾರ.
- Sex is not a four letter word.
- ನಾಲ್ಕು ಬಿಲಿಯನ್ ನಕ್ಷತ್ರಗಳಿವೆ ಎಂದು ನೀವು ಹೇಳಿದರೆ ತಕ್ಷಣ ಒಪ್ಪಿಕೊಳ್ಳುವ ಮಂದಿ 'ಹಸಿ ಬಣ್ಣ ಜಾಗ್ರತೆ' ಎಂದರೆ ಮುಟ್ಟಿ ನೋಡಿ ಪರೀಕ್ಷಿಸುತ್ತಾರೆ. ಏಕೆ?

✵

# ಬೋಂಡಾ ಮೆಷೀನು......

**- ಗುರು**

ಆಯಾ ಕಾಲಮಾನದಲ್ಲಿ ಬದುಕಿದವರಿಗೆ ಆಯಾ ಕಾಲಮಾನದ ವೈಶಿಷ್ಟ್ಯವೊಂದು ಇರುತ್ತದಂತೆ. ಸ್ವಾತಂತ್ರ್ಯ ಹೋರಾಟದ ಪೂರ್ವಕಾಲದಲ್ಲಿ ಬದುಕಿದ್ದವರಿಗೆ ಅದರ ಅನುಭವ, ಅದರ ನಂತರದವರಿಗೆ ಸ್ವಾತಂತ್ರ್ಯ ಹೋರಾಟದ ಅನುಭವ, ದೇಶ ನಡೆದುಬಂದು ಬೆಳೆದ ರೀತಿ: ಅದರ ನಂತರದ ಪೀಳಿಗೆಯಾದ ನಮ್ಮಂಥಹವರಿಗೆ ಈ ಹಿಂದಿನ ಎಲ್ಲಾ ಪೀಳಿಗೆಗಳಿಗೂ ದೊರಕಿದ ಅನುಭವ ಹಾಗೂ ರೋಚಕತೆಯನ್ನೂ ಮೀರಿದ ನೂತನ ವೈಜ್ಞಾನಿಕ, ಸಾಮಾಜಿಕ ಮತ್ತು ಅಂತರಾಷ್ಟ್ರೀಯ ಬೆಳವಣಿಗೆಗಳು... ನಮ್ಮ ಕಾಲದಲ್ಲಿ ನಮ್ಮ ಬೆನ್ನಿಗಿದೆ. ನಮ್ಮ ಕಾಲದಲ್ಲಿ ನಡೆದಷ್ಟು ಬೆಳವಣಿಗೆ ಬೇರೆ ಯಾವ ಕಾಲದಲ್ಲೂ ನಡೆದೇ ಇಲ್ಲ.

ಒಂದು ಸಣ್ಣ ಉದಾಹರಣೆಯಿಂದ ಶುರು ಹಚ್ಚಲೇ? ನಾನು ಕೆಲಸಕ್ಕೆ ಸೇರಿದಾಗ ಟೈಪಿಂಗ್ ಮೆಷೀನುಗಳು ಇದ್ದವು (ಈಗ ಇವು ಕೆಲವು ಕಛೇರಿಗಳಲ್ಲಿ ಮೂಲೆಯಲ್ಲಿ ಕೂತಿರುತ್ತವೆ). ಟೈಪು ಮಾಡಿದ ಪತ್ರಗಳ ಸಾವಿರಾರು ಪ್ರತಿಗಳನ್ನು ತೆಗೆಯಲು ಬೋಂಡಾ ಮೆಷೀನ್ ಎಂದು ಕರೆಯುತ್ತಿದ್ದ ಯಂತ್ರವಿತ್ತು. ಇದೇನೂ ಬೋಂಡಾ ತಯಾರಿಸೋಲ್ಲಾ, ಆದರೂ ಯಾಕೆ ಈ ಹೆಸರು ಅಂತ ತಲೆಕೆಡಿಸಿಕೊಂಡಿದ್ದೆ. ಅದಕ್ಕೆ ಸೈಕ್ಲೋಸ್ಟೈಲಿಂಗ್ ಮೆಷೀನು ಎಂದು ಹೆಸರಿದ್ದರೂ ಅದನ್ನು ಯಾಕೆ ಬೋಂಡಾ ಮೆಷೀನು ಎಂದು ಕರೆಯುತ್ತಾರೆ ಎಂದು ಸುಮಾರು ಸಲ ತಲೆನೋವು ಬರಿಸಿಕೊಂಡು ಕೊನೆಗೆ ತಡೆಯಲಾರದೇ ಯಾರೋ ಒಬ್ಬ ಮಹಿಳಾ ಸಹೋದ್ಯೋಗಿಯನ್ನು ಅದರ ಬಗ್ಗೆ ವಿಚಾರಿಸಿದ್ದೆ. ಕೇರಳದಿಂದ ಬಂದು ಇಲ್ಲೇ ನೆಲೆಸಿದ್ದವರು ಅವರು. ಬಾಯ್ ಅನ್ನುವುದನ್ನು ಬೋಯ್ ಎಂದೂ ಬಾಡಿ ಅನ್ನುವುದನ್ನು ಬೋಡಿ ಎಂದೂ ಉಚ್ಚರಿಸಿ ಅವರಿಗೆ ಅಭ್ಯಾಸ ವಾಗಿತ್ತು. ಸಾರಿ – ಅಂತ ಕ್ಷಮೆಯಾಚಿಸಬೇಕಾದರೆ ಅವರು ಶೋರೀ ಅನ್ನುತ್ತಿದ್ದರು. ನನ್ನ ಪ್ರಶ್ನೆ ಕೇಳಿದ ಅವರು ಅಷ್ಟೂ ಗೊತ್ತಿಲ್ಲವೇ ಅನ್ನುವ ಹಾಗೆ ನಕ್ಕರು. ಮೆಷೀನಿಗೆ ಸ್ಪೆಷಲ್ಲಾಗಿ ಬೋಂಡ್ ಪೋಪರು (ಇದು ಪೇಪರು) ಹಾಕುತ್ತಾರೆ ನೋಡಿ ಅದಕ್ಕೇ ಆ ಹೆಸರು ಅಂದಿದ್ದರು. ನಮ್ಮ ಸಂಪನ್ಮೂಲ ವಿಭಾಗದ ಹಿರಿಯ ಅಧಿಕಾರಿಯೊಬ್ಬರ ರೂಮಿನ ಪಕ್ಕದಲ್ಲಿ ಈ ಯಂತ್ರವಿತ್ತು. ಬೆಳಗಿನಿಂದ ಸಂಜೆಯವರೆಗೂ ಇದು ಪೇಪರುಗಳನ್ನು ಕೊಂಯ ಕೊಂಯ ಅಂತ ಶಬ್ದ ಹೊರಡಿಸುತ್ತಾ ಸೈಕ್ಲೋಸ್ಟೈಲಿಂಗ್ ಮಾಡಿದ್ದೇ ಮಾಡಿದ್ದು – ಅದರಲ್ಲೂ ಹಲವಾರು ಸಲ ಅಕ್ಷರಗಳೇ ಬೀಳುತ್ತಿರಲಿಲ್ಲ, ಇದಕ್ಕೆ ಕಾರಣ ಎಂದರೆ ಪೇಪರಿನಲ್ಲಿ ಸಣ್ಣ ಸಣ್ಣ ತೂತುಗಳನ್ನು ಮಾಡಿಸಿ ನಂತರ ಈ ದೈತ್ಯಾಕಾರದ ಯಂತ್ರಕ್ಕೆ ಅಳವಡಿಸಬೇಕಿದ್ದುದು – ಇದನ್ನು ಯಂತ್ರವೇ ಮಾಡುತ್ತಿತ್ತು – ಆದರೂ ಪರ್‌ಫೆಕ್ಷನ್ ಇರಲಿಲ್ಲ. ಈ ಯಂತ್ರದಲ್ಲಿ ಕೆಲಸ ಮಾಡುವವರು ಯಾವಾಗಲೂ ಮೈಕೈ ಮಸಿ ಮಾಡಿಕೊಂಡು ತಮಿಳು ಹಾಗೂ ತೆಲುಗು ಮತ್ತು ಅಪರೂಪಕ್ಕೆ ಕನ್ನಡ ಸಿನಿಮಾಗಳಲ್ಲಿ ಬರುವ ದೆವ್ವದ ಹಾಗೆ ಕಾಣಿಸುತ್ತಿದ್ದರು ಮತ್ತು ದೆವ್ವದ ಹಾಗೇ

ಅವರುಗಳ ಬಿಹೇವಿಯರೂ ಇದ್ದವು! ಅದಕ್ಕೆ ಕೆಲಸ ಪೂರೈಸುವುದಕ್ಕೆ ಮೊದಲೇ ಟೈಪಿಂಗ್ ಆಗಬೇಕಿತ್ತು. ಒಂದೇ ಒಂದು ತಪ್ಪಿದ್ದರೂ ಇಡೀ ಪುಟವನ್ನು ಮತ್ತೆ ಮತ್ತೆ ಟೈಪು ಮಾಡಬೇಕಿತ್ತು. ಒಂದೆರೆಡು ತಪ್ಪಿದ್ದರೆ ಅದನ್ನು ವೈಟನರ್ ಎನ್ನುವ ದ್ರಾವಕ ಬಳಸಿ ಮುಚ್ಚಬಹುದಾಗಿದ್ದರೂ ಬೋಂಡಾ ಕೆಲಸ ಮಾತ್ರಾ ಸಖತ್ ಬೇಜಾರು ಹುಟ್ಟಿಸುವ ಕಾರ್ಯವಾಗಿತ್ತು. ನೋಡು ನೋಡುತ್ತಾ ಇದ್ದ ಹಾಗೆಯೇ ಹಲವಾರು ಪ್ರತಿಗಳನ್ನು ಒಮ್ಮೆಗೇ ತೆಗೆಯಬಹುದಾದ ಯಂತ್ರ ಕ್ಸೆರಾಕ್ಸ್ ಬಂದಿತು. ಆಗ ತಾನೇ ಕ್ಸೆರಾಕ್ಸ್ ಅಂಗಡಿ ತೆರೆದಿದ್ದ ಸ್ನೇಹಿತನೊಬ್ಬ ಅಂಗಡಿ ಮುಂದೆ ಬೋರ್ಡು ಹೀಗೆ ಬರೆಸಿದ್ದ – ಯಾವುದೇ ಭಾಷೆಯದ್ದೇ ಆಗಲಿ, ಇಲ್ಲಿ ಕ್ಸೆರಾಕ್ಸ್ ಮಾಡಲಾಗುವುದು! ಇದು – ಬೋಂಡಾ ಮೆಷೀನು ಮೂಲೆಗೆ ಹೋಯಿತು.

ಹಳೇ ಟೈಪಿಂಗ್ ಯಂತ್ರಕ್ಕೆ ಬದಲಿಗೆ ಇನ್ನೊಂದು ಟೈಪಿಂಗ್ ಯಂತ್ರ ಬಂದಿತು. ಅದರಲ್ಲಿ ಕೆಲವು ಪತ್ರಗಳನ್ನು ಟೈಪಿಸಬೇಕಾದರೆ ಬೇಕಾಗಿರುವ ವಾಕ್ಯಗಳನ್ನು ಹಾಗೇ ಉಳಿಸಬಹುದಾಗಿತ್ತು, ಮತ್ತೆ ಉಪಯೋಗಿಸಲೂ ಬಹುದಾಗಿತ್ತು. ಆಗ ಆಹಾ ಎಂಥಹ ಅವಿಷ್ಕಾರವಿದು ಅಂತ ಅಂದುಕೊಂಡಿದ್ದೆವು. ವಕೀಲಿ ವೃತ್ತಿಯಲ್ಲಿದ್ದ ನನ್ನ ಮಿತ್ರರೊಬ್ಬರು ಈಗ ಎಂತಾ ಟೈಪರೈಟರು ಬಂದಿದೆ ಗೊತ್ತಾ ಅಂತ ತುಂಬಾ ಹುಮ್ಮಸ್ಸಿನಿಂದ ಟೈಪರೈಟರು ಗುಣಗಾನ ಮಾಡಿದ್ದರು! ನೋಡ್ತಾ ನೋಡ್ತಾ ಇದೂ ಮೂಲೆ ಸೇರಿ ಕಂಪ್ಯೂಟರುಗಳು ಬಂದವು. ನಮ್ಮ ಕಾರ್ಖಾನೆಯಲ್ಲಿ ಮೊದಲಬಾರಿಗೆ ಕಂಪ್ಯೂಟರುಗಳು ಬಂದಾಗ ಅದನ್ನು ಇಪ್ಪತ್ತು/ಇಪ್ಪತ್ತೈದು ಬೈ ನೂರು ಅಳತೆಯ ರೂಮಿನಲ್ಲಿ ಇರಿಸಿದ್ದರು. ಐಬಿಎಂ ಕಂಪನಿಯ ಮೊದಮೊದಲ ಉತ್ಪನ್ನ ಅದು. ಅದಕ್ಕೆ ಜಾಬ್ ಕಾರ್ಡುಗಳನ್ನು ಆಯತಾಕಾರದಲ್ಲಿ ಪಂಚ್ ಮಾಡಿತುಂಬುತ್ತಿದ್ದರು – ಆಗ ಅದಕ್ಕೆ ಎಯ್ಟಿ(80) ಕಾಲಂ ಕಾರ್ಡ್ ಎಂಬ ಹೆಸರು. ಇದನ್ನು ಮಾಡಲು ಆಪರೇಟರುಗಳಿಗೆ ತರಬೇತಿ ಇತ್ತು. ಆಗ ಹುಟ್ಟಿದ್ದು ಪಂಚಿಂಗ್ ಆಪರೇಟರು ಎಂಬ ಹುದ್ದೆ. ಇದನ್ನು ಕಲಿಸಲು ಊರಿನ ತುಂಬಾ ಸಂಸ್ಥೆಗಳು ಹುಟ್ಟಿದ್ದವು. ಇದೇ ಸಮಯದಲ್ಲಿಯೇ ನಮ್ಮಲ್ಲೊಂದು ಕ್ಯಾಲ್ಕುಲೇಟಿಂಗ್ ಮೆಷೀನು ತಯಾರಿಕಾ ಹಂತದಲ್ಲಿತ್ತು. ಅದೇ ಗುಣಾಕಾರ ಭಾಗಾಕಾರ ಕೂಡೋದು ಕಳಿಯೋದು ಟ್ರಿಗ್ನಾಮೇಟರಿ – ಸೈನು, ಕೋಸೈನು, ತೀಟಾ ಕಾಸ್ ತೀಟಾ... ಈ ರೀತಿಯ ಲೆಕ್ಕದ ಕೆಲಸಗಳು ಎಲ್ಲವನ್ನೂ ಮಾಡುತ್ತವೆ ಅಂತ ಕೇಳಿದ್ದೆವು. ಅದರ ಮಾಡಲ್ ತಯಾರಿಸಿದ್ದೂ ಆಯಿತು. ಒಂದೂವರೆ ಅಡಿ ಎತ್ತರ ಎರಡು ಅಡಿ ಅಗಲದ (ಹೆಚ್ಚುಕಡಿಮೆ ಅಕ್ಕಿ ಡಬ್ಬವನ್ನು ಹೋಲುತ್ತಿದ್ದ) ಈ ಮೆಷೀನು ಒಂದು ಸೂಟ್ ಕೇಸಿನ ಹಾಗಿತ್ತು. ನಮ್ಮ ಪ್ರಯೋಗ ಮುಗಿದು ಅದನ್ನು ಮಾರುಕಟ್ಟೆಗೆ ಬಿಡಬೇಕು ಅನ್ನುವಷ್ಟರಲ್ಲಿ ಒಂದು ದೊಡ್ಡ ತಮಾಷೆ ನಡೆಯಿತು. ಜಪಾನಿನವರು ಅಂಗೈ ಅಗಲದ ಇವೆಲ್ಲಾ ಕೆಲಸಗಳನ್ನೂ ಮಾಡುವ ಕ್ಯಾಲ್ಕುಲೇಟರನ್ನು ಮಾರುಕಟ್ಟೆಗೆ ತಂದುಬಿಟ್ಟರು! ಸುಮಾರು ವರ್ಷ ನಾವು ಈ ಸೂಟ್ ಕೇಸನ್ನು ನಮ್ಮ ಟೇಬಲ್ಲುಗಳ ಮೇಲೆ ಇರಿಸಿಕೊಂಡು ಕೆಲಸ ಮಾಡುತ್ತಿದ್ದೆವು. ಗೋಡೆಗೆ ನೇತುಹಾಕುವ ಕ್ಯಾಲೆಂಡರ್‌ನಲ್ಲಿನ ಅಂಕಿ/ಅಕ್ಷರಗಳಂತೆ ಇದರದ್ದೂ ದೊಡ್ಡ ಅಂಕಿಗಳು ಮತ್ತು ನೂರಡಿ ದೂರದಲ್ಲಿ ನಿಂತು ಅದರ ಅಂಕಿಗಳನ್ನು

ನೋಡಬಹುದಿತ್ತು. ಈಗಲೂ ಈ ಜಮಾನಾದ ಯಂತ್ರಗಳು ಒಂದೋ ಎರಡೋ ನಮ್ಮ ಕಾರ್ಖಾನೆಯಲ್ಲಿ ಇರಬಹುದು!

ನೋಡನೋಡುತ್ತಾ ಇದ್ದ ಹಾಗೆಯೇ ಟೇಬಲ್ಲಿನ ಮೇಲೆ ಇರಿಸಬಹುದಾಗಿದ್ದ ಕಂಪ್ಯೂಟರುಗಳು ಬಂದವು. ನಮ್ಮ ಹಳೆಯ ಕಂಪ್ಯೂಟರುಗಳು ಮೂಲೆ ಸೇರಿದವು. ಹೊಸದಾಗಿ ಈ ಟೇಬಲ್ ಮಾಡಲ್ ಬಂದಾಗ ಅದು ನಮ್ಮ ಹಿರಿಯ ಅಧಿಕಾರಿಗಳ ಬಳಿಯಲ್ಲಿಯೇ ಇರುತ್ತಿತ್ತು ಮತ್ತು ನನ್ನಂಥಹ ಶ್ರೀ ಸಾಮಾನ್ಯರಿಗೆ ಪ್ರವೇಶವಿರಲಿಲ್ಲ. ದೂರ ನಿಂತು ಅದರಲ್ಲಿ ಕೆಲಸಮಾಡುವವರನ್ನು ಕುತೂಹಲದಿಂದ ನೋಡಿಕೊಂಡು ಬರುತ್ತಿದ್ದೆವು. ಬರೀ ಒಂದೋ ಎರಡೋ ಪತ್ರಗಳು ಅದರಲ್ಲಿ ತಯಾರಾಗುತ್ತಿದ್ದವು! ಕಂಪ್ಯೂಟರಿನ ನೂರು ಪರ್ಸೆಂಟ್ ಉಪಯೋಗ ಆಗುತ್ತಲೇ ಇರಲಿಲ್ಲ. ಯಾವತ್ತಾದರೂ ಬದುಕಿರುವಷ್ಟರಲ್ಲಿ ಅವಕಾಶ ದೊರೆತರೆ ಅದನ್ನು ಒಂದು ಸಲ ಕೈನಲ್ಲಿ ಮುಟ್ಟಬೇಕು ಅನಿಸುತ್ತಿತ್ತು. ಒಂದೆರೆಡು ವರ್ಷದಲ್ಲಿ ಇವೂ ಹಳೆಯದಾಗಿ ಅದರ ಇಂಪ್ರೂವ್‌ಡ್ ವರ್ಷನ್ನಿನವು ಬಂದವು. ಹೊಸದು ಹಳೆಯದರ ಜಾಗ ಸೇರಿತು – ಹಳೆಯದನ್ನು ಡಿಸ್‌ಪೋಸು ಮಾಡುವುದು ಹೇಗೆ? ಒಂದು ರೂಮಿನಲ್ಲಿ ಅವುಗಳನ್ನು ತುಂಬುತ್ತಿದ್ದರು. ಅದಕ್ಕೆ ಒಂದು ದಪ್ಪನೆಯ ಬೀಗ ಜಡಿದು ರಿಸರ್ವ್ ಬ್ಯಾಂಕಿನಲ್ಲಿ ಚಿನ್ನ ಕಾಯುವ ಹಾಗೆ ಕಾಯುತ್ತಿದ್ದರು. ನನ್ನ ಟೇಬಲ್ಲಿನ ಮೇಲೆ ಈ ಹಳೆಯದರಲ್ಲಿ ಒಂದನ್ನು ಯಾಕೆ ತಂದು ಇಟ್ಟುಕೊಳ್ಳಬಾರದು ಅನಿಸಿದ್ದೇ ತಡ ಹೇಗೋ ಯಾರನ್ನೋ ಹಿಡಿದು ಅವರಿಗೆ ಇದನ್ನ ತಂದಿಟ್ಟುಕೊಂಡರೆ ಅದೇನೇನು ಮಾಡಬಹುದು, ಪ್ರೊಡಕ್ಷನ್ ಹೇಗೆ ವೃದ್ಧಿಸಬಹುದು, ಬೇಕಾಗಿರುವ ಮಾಹಿತಿಗಳನ್ನು ಒಂದೇ ಕಡೆ ಹೇಗೆ ಶೇಖರಿಸಬಹುದು... ಅಂತ ಕೊರೆದು ಹಾಗೂ ಹೀಗೂ ಒಂದು ಕಂಪ್ಯೂಟರು ನನ್ನ ಟೇಬಲ್ಲಿನ ಮೇಲೆ ಬರುವ ಹಾಗೆ ಮಾಡಿದೆ.

ಹಾಳು ಕಂಪ್ಯೂಟರು ಏನೋ ಬಂತು ಆದರೆ ಅದನ್ನು ಉಪಯೋಗಿಸುವುದು ಹೇಗೆ? ಲೈಬ್ರರೀಗೆ ಹೋಗಿ ಕೆಲವು ಪುಸ್ತಕಗಳನ್ನು ತಂದೆ, ಅದರಲ್ಲಿ ಬರೀ ಥಿಯರಿ ಮಾತ್ರ ಇವೆ – ಉಪಯೋಗಿಸೋದು ಹೇಗೆ ಅಂತ ಇಲ್ಲ! ಕಂಪ್ಯೂಟರುಗಳ ಮುಂದೆ ಕೂತು ಕೆಲಸಮಾಡುತ್ತಿದ್ದ ಕಿರಿಯ ಸಹೋದ್ಯೋಗಿಗಳನ್ನು ಇದನ್ನು ಆಪರೇಟ್ ಮಾಡೋದು ಹೇಳಿಕೊಡಿ ಪ್ಲೀಸ್ ಅಂದೆ. ಅವರು ಬಂದರು ಕಂಪ್ಯೂಟರು ಎದುರು ಕೂತರು, ಪಟಪಟ ಅಂತ ಕೆಲವು ಕೀಲಿಗಳನ್ನು ಒತ್ತಿದರು, ನೋಡೀ ಹೀಗೆ.. ಅಂದರು. ತಲೆಬುಡ ಒಂದೂ ಅರ್ಥವೇ ಆಗಲಿಲ್ಲ, ಹೊಸಾ ಪೀಳಿಗೆಯವರಿಗೆ ಯಾರಿಗೂ ಇದನ್ನು ನಮ್ಮಂಥಹವರಿಗೆ ಕಲಿಸಲು ಇಷ್ಟವಿಲ್ಲವೇನೋ ಅಂತ ಮೊದಲು ಅನ್ನಿಸಿತು. ಇದು ಕೆಟ್ಟರೆ ಯಾರೂ ಸಮಜಾಯಿಷಿ ಕೇಳುವವರು ಇಲ್ಲ ಅನ್ನೋದು ಮತ್ತು ಉಪಯೋಗವಿಲ್ಲದೇ ಇದನ್ನ ರೂಮಿನಲ್ಲಿ ತುಂಬಿದಾರೆ – ಯಾವ ಪ್ರಯೋಗ ಬೇಕಾದರೂ ನಾನೇ ಮಾಡಿಕೊಳ್ಳಬಹುದು ಅಕಸ್ಮಾತ್ ಕೆಟ್ಟುಹೋದರೆ ಫ್ಯಾಕ್ಟರಿಯಲ್ಲೇ ಸರ್ವೀಸು ಮಾಡುವವರೂ ಇದ್ದಾರೆ (ನನ್ನ ಜೇಬಿಂದ ಒಂದು ಪೈಸೆಯೂ ಹೋಗಲ್ಲ !) ಅಂತ ಪ್ರಯೋಗಕ್ಕೆ ನಾನೇ ಅಣಿಯಾದೆ. ಎಸ್ಸೆಲ್ಸಿಯಾದ ಮೇಲೆ ಮನೇಲಿ ಟೈಪಿಂಗ್ ಕ್ಲಾಸಿಗೆ ಹೋಗು ಅಂತ ಬಲವಂತ ಮಾಡಿದ್ದರು.


ಟೈಪಿಂಗ್ ಕಲಿತರೆ ಜೀವಮಾನ ಪೂರ್ತಿ ಟೈಪಿಸ್ಟ್ ಆಗೇ ಇರಬೇಕಾಗುತ್ತೆ ಅಂತ ನೆವ ಹೇಳಿ ಅದನ್ನು ತಪ್ಪಿಸಿಕೊಂಡಿದ್ದೆ. ಟೈಪಿಂಗ್ ಕಲಿತಿದ್ದರೆ ಎಷ್ಟು ಅನುಕೂಲವಾಗಿರೋದು ಅಂತ ಈಗ ಅನುಭವಕ್ಕೆ ಬಂತು. ಒಂದೊಂದೇ ಬೆರಳು ಉಪಯೋಗಿಸಿ ಕಲಿಕೆ ಆರಂಭಿಸಿದೆ. ಈಗಲೂ ಅದೇ ಅಭ್ಯಾಸ – ಕಂಪ್ಯೂಟರಿನ ಮುಂದೆ ಕೂತು ಒಂದೊಂದೇ ಕೀಯನ್ನು ಕುಟ್ಟುವುದು! ಚಿಕ್ಕಂದಿನಲ್ಲಿ ಕಲೀಬೇಕಾದ್ದನ್ನು ಕಲೀದಿದ್ದರೆ ಹೇಗಾಗುತ್ತೆ ನೋಡಿ!

ಎರಡು ಮೂರು ದಿವಸ ಕಂಪ್ಯೂಟರಿನ ಮುಂದೆ ಕೂತು ಕೀಲಿಮಣೆಯನ್ನು ಕುಟ್ಟಿದೆ, ಕೀಲಿಮಣೆಯ ರಹಸ್ಯ – ಸುಮಾರು ಶೇ. 20ರಷ್ಟು – ಅರ್ಥವಾಯಿತು. ನಿಧಾನಕ್ಕೆ ಈ ಯಕ್ಷ ಯಂತ್ರ ನನ್ನನ್ನು ಅದರೊಳಕ್ಕೆ ಸೆಳೆದುಕೊಂಡಿತು. ಸುಮಾರು ಕಲಿತನಂತರ ನನ್ನ ಸಹೋದ್ಯೋಗಿಗಳು ಕೆಲವರಿಗೆ ಬನ್ನಿ ನಿಮಗೂ ಇದನ್ನು ಹೇಳಿಕೊಡ್ತೀನಿ ಏನು ಮಜಾ ಇರುತ್ತೆ ಗೊತ್ತಾ ಕಂಪ್ಯೂಟರಿನ ಮುಂದೆ ಕೂತು ಕೆಲಸ ಮಾಡೋದು? ಸಮಯ ಹೋಗೋದೇ ನಿಮಗೆ ಗೊತ್ತಾಗಲ್ಲ ಅಂತ ಆಹ್ವಾನಿಸಿದೆ. ಅಡ್ಡಡ್ಡ ತಲೆಯಾಡಿಸಿದರು – ಅದನ್ನ ಕಲಿತರೆ ಇನ್ನೂ ಹೆಚ್ಚು ಕೆಲಸದ ಹೊರೆ ನಮ್ಮ ಮೇಲೇನೇ ಬೀಳುತ್ತೆ, ಈಗ ಹಾಯಾಗಿದ್ದೀವಿ, ಅದನ್ನು ಕಲಿಯೋಲ್ಲ... ಅಂದುಬಿಟ್ಟರು! ಮುಂದೆ ಎಂಟು ಹತ್ತು ವರ್ಷಗಳಲ್ಲಿ ಮನೆಮನೆಗಳಲ್ಲಿ ಇದು ಬರುತ್ತೆ ಅದರ ಬಗ್ಗೆ ಒಂದು ಚೂರಾದರೂ ತಿಳಿದಿದ್ದರೆ ಒಳ್ಳೆಯದು ಅಂತ ಆಗ ಗೊತ್ತಿರಲಿಲ್ಲ – ಈಗ ಅದೇ ಸ್ನೇಹಿತರು ನೋಡ್ರೀ ಕಂಪ್ಯೂಟರು ಕಲೀಲಿಲ್ಲ, ಪ್ರತಿಯೊಂದಕ್ಕೂ ಮಕ್ಕಳನ್ನೇ ಕಾಯೋ ಹಾಗಿದೆ ಅನ್ನುವುದನ್ನು ಕೇಳಿದಾಗ ಪಾಪ ಅನಿಸುತ್ತೆ. ಅದರಲ್ಲೂ ಮೊನ್ನೆ ಒಬ್ಬರು ಮನೇಗೆ ಬಂದರು. ಒಂದು ಸೀಡಿ ಯಾರೋ ಕಳಿಸಿದಾರೆ ಅದನ್ನು ಸ್ವಲ್ಪ ನೋಡಬೇಕು, ನಿಮ್ಮ ಕಂಪ್ಯೂಟರಿನಲ್ಲಿ ಹಾಕಿ ತೋರಿಸ್ತೀರಾ ಅಂತ ಕೇಳಿದರು. ರೂಮಿಗೆ ಕರೆದು ಕಂಪ್ಯೂಟರಿನಲ್ಲಿ ಅವರು ತಂದಿದ್ದ ಸೀಡಿ ಹಾಕಿ ತೋರಿಸಿದೆ. ಆಮೇಲೆ ಸೀಡಿ ತೆಗೆದು ಅವರ ಕೈಲಿ ಕೊಟ್ಟೆ. ಇನ್ನೂ ಹಾಗೇ ಕೂತಿದ್ದರು. ಇನ್ನೇನಾದರೂ ಬೇಕಿತ್ತೇ? ಅಂದೆ. ಸೀಡಿ ತಿರುಗಿಸಿ ಹಾಕಲಿಲ್ಲವಲ್ಲಾ ನೀವು? ಅಂದರು! ಸೀಡಿ ಅಂದರೆ ನಮ್ಮ ಹಳೇಕಾಲದ ಗ್ರಾಮಾಫೋನಿನ ರೆಕಾರ್ಡಿನ ಹಾಗೆ, ಅದನ್ನು ತಿರುಗಿಸಿಯೂ ಹಾಕಬಹುದು ಅನ್ನುವ ತಿಳುವಳಿಕೆ ಸುಮಾರು ಜನರಲ್ಲಿದೆ. ನನಗಿಂತಲೂ ಮೊದಲು ಹುಟ್ಟಿದವರು ಕೆಲವರು ನಮ್ಮ ಅಕೌಂಟ್ಸ್ ವಿಭಾಗದಲ್ಲಿದ್ದರು. ಕಂಪ್ಯೂಟರಿನ ಮುಂದೆ ಕೂತು ಅವರು ಎಕ್ಸೆಲ್ ಎನ್ನುವ ವಿಧಾನದಲ್ಲಿ ನಮ್ಮ ಸಂಬಳಗಳನ್ನು ಲೆಕ್ಕ ಹಾಕುತ್ತಿದ್ದರು. ಅವರ ಪಕ್ಕ ಒಂದು ಆಗಲೇ ಹೇಳಿದ ದೊಡ್ಡ ರಾಕ್ಷಸ ರೂಪಿನ ಕ್ಯಾಲ್ಕುಲೇಟರು. ಎಕ್ಸೆಲ್ ಷೀಟಿನಲ್ಲಿ ಲೆಕ್ಕ ಹಾಕಿದ ನಂತರ ಅವರು ಈ ಕ್ಯಾಲ್ಕುಲೇಟರಿನಲ್ಲಿ ಮತ್ತೆ ಕೂಡೋದು ಕಳೆಯೋದು ಮಾಡಿ ಈಗ ಸರಿ ಅನ್ನುತ್ತಿದ್ದರು. ಯಾಕೆ ಸಾರ್ ಅದು ಸರಿ ಇಲ್ಲವೇ? ಅಂತ ಕೇಳಿದರೆ ನೋಡಿ ಅದು ಹೇಗಿದ್ದರೂ ಮೆಷೀನು, ತಪ್ಪು ಗಳು ಆಗೋ ಛಾನ್ಸು ಇದ್ದೇ ಇರುತ್ತೆ – ಅದಕ್ಕೇ ಒಂದು ಸಲ ಕ್ರಾಸ್ ಚೆಕ್ ಮಾಡಿಬಿಡ್ತೀನಿ ಅನ್ನುವರು. ಕ್ಯಾಲ್ಕುಲೇಟರು ಸಹಾ ಮೆಷೀನೇ ಅಲ್ಲವೇ? ಅನ್ನಿ, ಅದೂ ಸಾರ್, ಪಳಗಿದೆ ಇದಿನ್ನೂ ಪಳಗಿಲ್ಲವಲ್ಲಾ. ಇವೆಲ್ಲವೂ ಪಳಗುವವರೆಗೆ ಅಕೌಂಟ್ಸ್‌ನವರ ಕಾರ್ಯವಿಧಾನ ಹೀಗೇ ಮುಂದುವರೀತು! ಹಾಗೆ ನೋಡಿದರೆ ಪಳಗಿದ ನಂತರ ಎಲ್ಲವೂ ಸುಖಾಂತ್ಯವೇ ಅಲ್ಲವೇ?

ಇನ್ನು ಫೋನಿನ ವಿಷಯಕ್ಕೆ ಬನ್ನಿ – ಮೂರುವರ್ಷ ಒಂದು ಫೋನಿಗೆ ಕಾದಿದ್ದೆವು ಅಂತ ನಿಮ್ಮ ಬಂಧುಗಳು ಹೇಳುವುದನ್ನು ಕೇಳಿರುತ್ತೀರಿ. ಇಡೀ ಏರಿಯಾಕ್ಕೆ ಇದ್ದ ಒಂದೇ ಮನೆಯ ಫೋನಿನಿಂದ ವಿಷಯ ವಿನಿಮಯವಾಗುತ್ತಿತ್ತು. ಫೋನುಗಳು ಸುಲಭವಾಗಿ ಸಿಗಲು ಆರಂಭವಾಯಿತು ನೋಡಿ, ಜಗತ್ತು ಏಕ್ ದಂ ಕುಗ್ಗಿಬಿಟ್ಟಿತು!

ಸುಮಾರು ಈ ಸಮಯದಲ್ಲಿಯೇ ಪೇಜರ್ ಎನ್ನುವ ಒಂದು ಸಾಧನ ಮಾರುಕಟ್ಟೆಗೆ ಬಂತು (ಅಂದಹಾಗೆ ಈಗ ಇದು ಮರೆತೇ ಹೋಗಿದೆ ಅಲ್ಲವೇ ಯಾರಿಗೂ ಇದರ ನೆನಪೇ ಇಲ್ಲ). ಆಗ ಯಾರನ್ನೇ ನೀವು ನೋಡಿ, ಸೊಂಟಕ್ಕೆ ಒಂದು ಬೆಲ್ಟು ಕಟ್ಟಿಕೊಂಡು ಅದರಲ್ಲಿ ಒಂದು ಪರ್ಸಿನ ಆಕಾರ ಮಾಡಿಸಿಕೊಂಡು ಪೇಜರನ್ನು ಅದರಲ್ಲಿ ಎಲ್ಲರಿಗೂ ಎದ್ದು ಕಾಣುವ ಹಾಗೆ ಪ್ರದರ್ಶನ ಮಾಡುತ್ತಿದ್ದರು. ಇನ್‌ಸರ್ಟ್ (ಅಂದರೆ ಅಂಗಿಯನ್ನು ಪ್ಯಾಂಟಿನಲ್ಲಿ ತೂರಿಸುವ) ಅಭ್ಯಾಸವಿಲ್ಲದವರೂ ಪೇಜರ್ ತೋರಿಸಲು ಅದನ್ನ ಹೊಸದಾಗಿ ಅಭ್ಯಾಸ ಮಾಡಿದ್ದರು! ಇದರಲ್ಲಿ ಏನಪ್ಪಾ ಪ್ರಯೋಜನ ಅಂದರೆ ನೀವು ಸಂಪರ್ಕಿಸಬೇಕಾದ ಮನುಷ್ಯನ ಹತ್ತಿರ ಇದು ಇದ್ದರೆ ನೀವು ಬರೀ ನಿಮ್ಮ ಫೋನಿನಿಂದ ಆತನಿಗೆ ಒಂದು ಫೋನು ಹಾಕಿದರೆ ಸಾಕು, ಅದು ಅವನಿಗೆ ತಲುಪುತ್ತಿತ್ತು ಮತ್ತು ಹತ್ತಿರದಲ್ಲಿ ಆತನಿಗೆ ಫೋನಿನ ಸಂಪರ್ಕ ಸಿಕ್ಕುವ ಹಾಗಿದ್ದು ಆತ ನಿಮ್ಮನ್ನು ಸಂಪರ್ಕಿಸುವ ಆಸೆ ಹೊಂದಿದ್ದರೆ ನಿಮ್ಮನ್ನು ಎಟುಕುತ್ತಿದ್ದ! ಇದು ಆ ಕಾಲಕ್ಕೆ ಒಂದು ಕ್ರಾಂತಿ ಅಂದುಕೊಂಡಿದ್ದೆವು. ಮೊಬೈಲು ಫೋನುಗಳು ಇನ್ನೂ ಬಂದಿರಲಿಲ್ಲ. ಒಂದಾರೇಳು ತಿಂಗಳು ಕಳೀತು ನೋಡಿ, ಮೊಬೈಲು ಫೋನುಗಳು ಇಟ್ಟಾಡಿಸಿಕೊಂಡು ಬಂದವು. ಪೇಜರಿನ ಆಯಸ್ಸು ಬರೀ ಆರುತಿಂಗಳೋ ವರ್ಷವೋ ಇತ್ತು ಅಷ್ಟೇ! ಮೊಬೈಲು ಫೋನು ಬಂತಾ ಜಗತ್ತಿನ ಅಗಲ ಉದ್ದ ಎರಡೂ ಕಿರಿದಾದವು. ಮನೆಗಳಲ್ಲಿ ಫೋನುಗಳೇ ಇಲ್ಲದ ದಿನಗಳು: ರಾತ್ರಿ ಸಮಯದಲ್ಲಿ ಅಂತರಾಷ್ಟ್ರೀಯ ಕರೆಗಳಿಗೆ ಅರ್ಧ ಚಾರ್ಜು ಇತ್ತಲ್ಲಾ ಆಗಿನ ಪಾಡು ನೆನಸಿಕೊಳ್ಳಿ. ರಾತ್ರಿ ಹತ್ತರ ನಂತರ ಎಸ್.ಟಿ.ಡಿ. ಅಂಗಡಿಗಳ ಮುಂದೆ ಶಾಲು ಹೊದ್ದು ಮುನಿಸಿಕೊಂಡಿರುತ್ತಿದ್ದ ಹೆಂಡತಿಯ ಸಂಗಡ ಘಂಟೆಗಟ್ಟಲೆ ಕಾದು ಕೂರುತ್ತಿದ್ದ ದೃಶ್ಯ ನೆನಪಿಗೆ ಬಂತೇ? ದೂರದ ದೇಶದ, ಊರಿನ ಮಕ್ಕಳು ಮರಿಗಳ ಧ್ವನಿಗಳನ್ನು ಕೇಳಲು ತವಕಿಸುತ್ತಿದ್ದ ತಂದೆತಾಯಿ ಮೊಬೈಲು ಬಂದನಂತರ ನಿರಾಳವಾದರು! ಈಗ ಪ್ರತಿ ಮನೇಗೆ ಕನಿಷ್ಟ ಅರ್ಧ ಡಜನ್ ಮೊಬೈಲು ಫೋನುಗಳು ಇವೆ ಮತ್ತು ನಮ್ಮ ಬೇಡಿಕೆಗಳನ್ನು ಪೂರೈಸಲು ಹಲವಾರು ಸಂಸ್ಥೆಗಳೂ ಪೈಪೋಟಿಯಲ್ಲಿ ಕಾರ್ಯನಿರತವಾಗಿವೆ. ಇವತ್ತು ಕಂಡಿದ್ದು ನಾಳೆ ಬದಲಾವಣೆಯಾಗಿರುತ್ತೆ. ಜಗತ್ತು ಭಾರೀ ವೇಗದಲ್ಲಿ ಓಡುತ್ತಿದೆ. ಇವೆಲ್ಲಾ ನಮ್ಮ ಅಪ್ಪನ ಕಾಲದಲ್ಲಿ ಅಜ್ಜನ ಕಾಲದಲ್ಲಿ ಇದ್ದಿದ್ದರೆ....! ಅಕಸ್ಮಾತ್ ಅವರ ಕಾಲದಲ್ಲಿ ಇವೆಲ್ಲವೂ ಇದ್ದಿದ್ದರೆ ಮಧ್ಯಮವರ್ಗದ ಶೇಕಡಾ ತೊಂಬತ್ತರಷ್ಟು ಜನ ಈಗ ಅಮೇರಿಕಾದಲ್ಲಿ ದುಡ್ಡು ಸಂಪಾದನೆ/ಕೆಲಸ ಮಾಡಿಕೊಂಡು ಇರುತ್ತಿದ್ದೇವೇನೋ! ಅಂದರೆ ನಾವು ಪಳಗುತ್ತಾ ಇದ್ದೇವೆ.... ಮುಂದಿನ ಪೀಳಿಗೆ ಹೇಗೆ ನಮಗಿಂತಲೂ ಆರಾಮವಾಗಿರಬಹುದು... ಅಲ್ಲವೇ?

✵




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಅತಿಥಿ ದೆವ್ವೋ ಭವ

**- ವಾಣೀ ಸುರೇಶ್**

''......ಹೀಗಾಗಿ ಇವುಗಳ ಕಾಟದಿಂದ ಮೊನ್ನೆ ಮೊನ್ನೆವರ್ಗೂ ನಾನು ರಾತ್ರಿ ಹೊತ್ತು ಸರಿಯಾಗಿ ನಿದ್ದೆ ಮಾಡದೇ ಬಹಳ ವರ್ಷಗಳೇ ಕಳೆದಿತ್ತು ನೋಡು'' - ಅಂತಂದಿದ್ದು ನಮ್ಮ ಪಕ್ಕದ ಮನೆ ಹ್ಯಾರಲ್ಡು. ಅವತ್ತು, ನಾವು ಹರಟುತ್ತಿದ್ದಾಗ. ಅಷ್ಟೊತ್ತೂ ಆತ ಬಣ್ಣಾಬಣ್ಣೆಕೆಯಾಗಿ ವರ್ಣಿಸಿದ ಅವನ ಅನುಭವಗಳು ರೋಮಾಂಚಕವಾಗಿದ್ದವು.

''ಅಲ್ಲಾ ಹ್ಯಾರಲ್ಡ್, ಇಂಥಾ ಯಾಂತ್ರೀಕೃತ, ಪಾಶ್ ಆದ ಈ ಜನನಿಬಿಡ ಬಡಾವಣೆಯಲ್ಲಿ ಹಾಗೆಲ್ಲಾ ಆಗಕ್ಕೆ ಹೇಗೆ ಸಾಧ್ಯ ಹೇಳು! ಅದೂ ಇಷ್ಟೆಲ್ಲಾ ಮುಂದುವರೆದ ಅತ್ಯಾಧುನಿಕವಾದ ನಿಮ್ಮ ಈ ದೇಶದಲ್ಲಿ?'' - ಅಂತ ಪಟ್ಟು ಬಿಡದ ನಾನು.

''ನಾನಿನ್ನೇನು ತಾನೇ ಹೇಳಲಿ ವೆನಿ. ದಿನಾ ನಡೆಯುವ ಕಥೆಯನ್ನ ನಿನ್ಗೊಪ್ಪಿಸಿದ್ದೀನಿ. ಬೇಕಾದ್ರೆ ನಂಬು ಬೇಡದಿದ್ರೆ ಬಿಡು'' - ಅಂತ ದೀರ್ಘವಾಗಿ ಸಿಗಾರ್ ಎಳೆದ ಹ್ಯಾರಲ್ಡ್.

''ಹಾಗಾದ್ರೆ ದೆವ್ವಗಳಿವೇಂತ ತಾನೇ ನೀನು ಪ್ರತಿಪಾದಿಸ್ತಿರೋದು?'' - ನನ್ನ ಮುಂದುವರೆದ ಪಾಟೀ ಸವಾಲು...

''ಇಷ್ಟೆಲ್ಲಾ ಅನುಭವಗಳಾದ ಮೇಲೆ ಯಾಕೋ ಆ ನಿರ್ಧಾರ ತಪ್ಪಿರಲಾರದೂಂತನ್ನಿಸತ್ತೆ ನಂಗೆ'' - ಮುಗುಳ್ನಗುವಿನೊಂದಿಗೆ ಅವನ ಉತ್ತರ. ಹಾಗೇ ಮುಂದುವರೆಯುತ್ತಾ - ''ನಿನ್ನ ಹಾಗೇ, ನನ್ನಳಿಯ - ಅದೇ ನಮ್ಮ ಕೇಟೀ ಗಂಡ ಬಾಬ್ ಕೂಡಾ ನನ್ನನ್ನ ಹೀಗೇ ಸತಾಯಿಸೋನು. ಅದಕ್ಕೇ ಅವತ್ತೊಂದಿನ 'ಈ ರಾತ್ರಿ ನಮ್ಮನೇಲಿ ಕಳೀಲೇಬೇಕು ನೀನಿವತ್ತು' - ಅಂತ ಬಲವಂತವಾಗಿ ಉಳಿಸಿಕೊಂಡೆ. ಅದಾದ ಮೇಲೆ ಅವನ್ದೂ ದೂಸ್ರಾ ಮಾತಿಲ್ಲ ನೋಡು'' - ಅಂತಂದ.

ಇವನ ಅಳಿಯನ್ನ ಎಲ್ಲಿಂತ ತಾನೇ ಹುಡುಕ್ಕೊಂಡೋಗ್ಲೀ ನಾನು? ಅಥವಾ ಇವರ ಮನೆಯ ದೆವ್ವಗಳನ್ನ ಬೇಕಾದ್ರೆ ನಾನೂ ಹೋಗಿ ಭೆಟ್ಟಿಯಾಗಬಹುದೂಂತರ್ಥವೇ? ನನ್ನಲ್ಲಿರೋ ಮಲೆನಾಡಿನ ಜೀನ್ಸ್ ಕಾರಣದಿಂದ್ಲೋ ಏನೋ ನಂಗೆ ದೆವ್ವ ಭೂತಗಳ ಕತೆಗಳು ಅಂದ್ರೆ ಕಿವಿ ನಿಮಿರತ್ತೆ ನಿಜ. ಆದ್ರೆ ಬಯಲುಸೀಮೆ ಜೀನ್ಸೂ ಇರೋದ್ರಿಂದ್ಲೋ ಏನೋ, ತೀರಾ ಹೋಗಿ, ಅವುಗಳನ್ನು ಭೇಟಿಯಾಗಿ, ಟೆಸ್ಟ್ ಮಾಡಿಯೇ ನೋಡ್ತೀನೀನ್ನೋವಷ್ಟು ಕೆಚ್ಚು ಮೂಡಿಲ್ಲ ನೋಡಿ.

ಇನ್ನೂ ಇವನ ಕೇಸಲ್ಲಾದ್ರೆ, ಅರವತ್ತು ವರ್ಷದಲ್ಲಿ ಶುರುವಾಗಿರಬಹುದಾದ ಅರಳುಮರುಳಿಗೆ ಈಗ ಇನ್ನೊಂದಿಪ್ಪತ್ತೈದು ಮೂವತ್ತು ವರ್ಷ ಆಗಿರೋ ಸಾಧ್ಯತೆ ಇದೇಂತನ್ಕೋಬಹುದೇನೊ. ಆದ್ರೂ ಈತನ ಅಗಾಧ ಮನೋಸ್ಥೈರ್ಯ, ಜೀವನೋತ್ಸಾಹಗಳನ್ನು ನೋಡಿದರೆ, ಹಾಗೆಲ್ಲಾ ವಿನಾಕರಣ ಯೋಚಿಸಿದ್ದಕ್ಕೆ ನಾವೇ

ಪ್ರಾಯಶ್ಚಿತ್ತ ಮಾಡ್ಕೋಬೇಕು ಅಂತನ್ನಿಸಿದರೆ ಆಶ್ಚರ್ಯವೇನಿಲ್ಲ. ನಿಜವಾಗಲೂ ಅಚ್ಚರಿ ತರುವ, ಅಂಥಾ ಅಪರೂಪದ ಮಾನಸಿಕ, ದೈಹಿಕ ಸದೃಢತೆ ಅವನದ್ದು! ಮುಖ ಒಂದು ಬಿಟ್ಟು ಮೈಮೇಲೆ ಆಗಿರುವ ಗುಂಡಿನ ಗಾಯದ ಗುರುತುಗಳು ಮತ್ತು ಬೆನ್ನುಮೂಳೆಯ ಮುರಿತ ಇವೆರಡೂ ಅವನು ಭಾಗವಹಿಸಿದ ವರ್ಲ್ಡ್ ವಾರಿನ ಪರಿಣಾಮ. ಅಷ್ಟು ಹೊರತು ವಯಸ್ಸಿಗೆ ಸಹಜವಾದ ದನಗಿವುಡು ಒಂದೇ ಇವನನ್ನು ಬಾಧಿಸುವುದು! ಇನ್ನು ಜುಜುಬಿ ಬ್ಲಡ್ ಪ್ರೆಶರ್ರು, ಡಯಾಬಿಟೀಸ್ಗಳಿಗೆ ಇವನ ಹತ್ತಿರ ಸುಳಿಯೋವಷ್ಟು ತಾಕತ್ತೆಲ್ಲಿ ಬರಬೇಕು!

ಇರಲಿ ತಡೀರಿ, ಆಮೇಲೇನಾಯ್ತು ಹೇಳ್ತೀನಿ.

ಅಷ್ಟೊತ್ತಿಗೆ ಹ್ಯಾರಲ್ಡಿನ ಪರಮ ಮಿತ್ರ/ಶಿಷ್ಯ/ಭಕ್ತ – ಕ್ಯಾಸ್ ಹಾಜರಾದ ಸದ್ಯ.

ಕ್ಯಾಸ್ ಯಾರೂಂತೀರೇನೋ... ಈತ ಅವನ ಆಚೆಯ ಪಕ್ಕದ ಮನೆಯಾತ. ಇತ್ತೀಚೆಗಷ್ಟೇ ತಾನೂ ಪತ್ನೀವಿಯೋಗವನ್ನು ಅನುಭವಿಸುತ್ತಿರುವ ಒಬ್ಬಂಟಿ, ಸ್ನೇಹಜೀವಿ. ನೋಡಲು ಕಾಣಿಸುವುದಕ್ಕಿಂತಾ ಒಂದು ಹತ್ತು ಹನ್ನೆರಡು ವರ್ಷ ಹೆಚ್ಚು ವಯಸ್ಸಾಗಿರುವ, ಸುಮಾರು ಎಂಭತ್ತರ ಆಸುಪಾಸಿನಲ್ಲಿರುವ ಹಸನ್ಮುಖಿ. ಅತ್ಯಂತ ಶಿಸ್ತಿನ ವ್ಯಕ್ತಿಯಾದ ಇವನಿಗೊಬ್ಬಳು ರೋಸಿಯೆಂಬ ಎಂಟು ವರ್ಷದ, ಉದ್ದನೆಯ ಕಿವಿಗಳ ಆಪ್ತ ಸಖಿ! ಕೆನೆಬಣ್ಣದ, ಗುಂಗುರು ಗುಂಗುರು ಜೂಲಿನ ರೋಸಿಯ ಲೀಶ್ ಹಿಡಿಯದ ಕ್ಯಾಸನ್ನು ಕಲ್ಪಿಸಿಕೊಳ್ಳಲೂ ಅಸಾಧ್ಯ.

ಸರಿ, ಕ್ಯಾಸ್ ಬಂದ ತಕ್ಷಣ ನನ್ನ ಪ್ರಶ್ನೆ ಅವನಿಗೆ ಪಾಸ್ ಆಯಿತು. ದೆವ್ವಗಳ ಅಸ್ತಿತ್ವದ ಬಗ್ಗೆ ಅವನಿಗೆ ಸ್ವಲ್ಪ ದ್ವಂದ್ವ ಇದ್ದಂತೆ ಕಂಡಿತು. ಅನಾಮತ್ತಾಗಿ ತನ್ನ ಹೆಗಲೇರಿದ ಪ್ರಶ್ನೆಯಿಂದ ಯಾವುದೋ ಸೌತ್ ಏಶಿಯನ್ ಮೂಲದ ಪರದೇಶಿಯ ಮಹಿಳೆಯೆದುರು ಅಷ್ಟು ಲಘುವಾಗಿ ಜಾರಿಕೊಳ್ಳುವುದು ಅವನಿಗೆ ಒಪ್ಪಿಗೆಯಾದಂತೆ ಕಾಣಲಿಲ್ಲ. ಅವನು – ''ಅದು ಹಾಗಲ್ಲ ನೋಡು ವೆನಿ ಹ್ಯಾರಲ್ಡಿನ ಅನುಭವಗಳನ್ನು ಕೇಳಿದರೆ ಎಂಥೋರಿಗೂ ನಂಬಿಕೆ ಹುಟ್ಟದೇ ಇರಕ್ಕೆ ಹೇಗೆ ಸಾಧ್ಯ ಹೇಳು''! – ಅಂತ ಅಡ್ಡ ಗೋಡೆ ಮೇಲೆ ದೀಪ ಇರಿಸಿದ.

ಅದುವರಿಗೂ ಸುಮಾರು ಒಂದು ಘಂಟೆಗೂ ಮೀರಿ ಅಲ್ಲಿಯವರೆಗೂ ನಾನು ಕೇಳಿಸಿಕೊಂಡಿದ್ದ ಹಲವಾರು ಕತೆಗಳೇನೋ ಅತಿ ರೋಚಕವೇ ಆಗಿದ್ದವು ನಿಜ. ಒಂದಂತೂ ಅವನು ಸುಮಾರು ಹದಿಮೂರು ವರ್ಷದವನಿದ್ದಾಗ ತನ್ನ ಅಜ್ಜಿಯ ಫಾರ್ಮ್ ಹೌಸಿನಲ್ಲಿ ನಡೆದದ್ದಂತೆ. ಅಸಭ್ಯ ಕುಡಿತದ ಅಭ್ಯಾಸಕ್ಕೆ ಬಿದ್ದಿದ್ದ ಅವನ ಕೊನೆಯ ಸೋದರ ಮಾವ, ಆ ಬೆಳದಿಂಗಳ ರಾತ್ರಿಯಲ್ಲಿ ಸದ್ದಿಲ್ಲದೇ ತನ್ನ ತಂದೆ ತಾಯಿಯವರಿಗೆ ತಿಳಿಯದೆ ಮಲಗಲು ಬಂದಿದ್ದಿರಬೇಕು – ಎಂದು ಮಧ್ಯ ರಾತ್ರಿಯಲ್ಲಿ ನಿದ್ದೆಯಿಂದ ಎಚ್ಚರವಾದ ಇವನಿಗೆ ಅನ್ನಿಸಿದ್ದರಿಂದ, ಹಾಗೇ ಅಲ್ಲಾಡದೆ ಮಲಗಿಕೊಂಡೇ ಜಾಸೂಸಿ ಮಾಡ್ತಿದ್ನಂತೆ. ಇವನು ನೋಡನೋಡುತ್ತಿರೋ ಹಾಗೇ ಬಾಗಿಲನ್ನು ಮೃದುವಾಗಿ ತಳ್ಳಿ, ಅದರ ಬಿರುಕಿನಲ್ಲಿ ಬೆಳ್ಳನೆಯ ಹೊಗೆಯಂತಿದ್ದ ಎಂಥದ್ದೋ ಒಂದು ತೂರಿಕೊಂಡು, ತೇಲುತ್ತಾ ಮುಂದುಮುಂದಕ್ಕೆ ಬಂತಂತೆ! ರೂಮಿನೆಲ್ಲಾಕಡೆ ಥಂಡಿಯುಂಟು ಮಾಡಿದ ಆ ವಿಚಿತ್ರ ಆಕಾರ ಇವನು ಹೊದಿಕೆಯ ಮರೆಯಿಂದ ಇಣುಕುತ್ತಿರುವಂತೆಯೇ, ಇವನ ಮಂಚದ ಪಕ್ಕದ ಕನ್ನಡಿಯೊಳಗೆ ಸದ್ದಿಲ್ಲದೇ ನುಸುಳಿ ಮಾಯವಾಯಿತಂತೆ!

ಅಷ್ಟೇ ಅಲ್ಲದೇ, ಇವನ ಮನೆಯಲ್ಲಿ ವರ್ಷಾನುಗಟ್ಟಲೆಯಿಂದ ಪ್ರತೀ ರಾತ್ರಿಯಿಡೀ ಯಾರ್ಯಾರೋ ಅಡಿಗೆ ಮನೆಯ ಮುಚ್ಚಿರುವ ಬಡುಗಳ ಬಾಗಿಲನ್ನು ಒರಟೊರಟಾಗಿ ತೆಗೆದೂ – ಮುಚ್ಚೀ ಮಾಡೋದು, ಬಾಗಿಲುಗಳನ್ನು ಬಡಿಯೋದು, ಪಾತ್ರೆಪಡಗಗಳನ್ನು ರಳಿಸಿ ಒಡೆಯೋದು, ಧಮ ಧಮ ಅಂತ ನಡೆದಾಡುವುದು – ಇವೇ ಇತ್ಯಾದಿಗಳು ದಿನಾಗಲೂ ನಡೆಯುತ್ತಂತೆ! ಈ ವಿಚಿತ್ರಗಳನ್ನು ತನ್ನ ಅಳಿಯನಿಗೆ ತೋರಿಸಬೇಕೆಂದಿದ್ದ ಆ ರಾತ್ರಿ, ಹಿಂದಿನ ಗಾಜಿನ ಬಾಗಿಲು ಫಳಾರ್ ಎಂದು ಒಡೆದ ಸದ್ದು ಕೇಳಿಸಿದ್ರಿಂದ ಇನ್ನೂ ಟೀವಿ ನೋಡುತ್ತಾ ಕುಳಿತಿದ್ದ ಇವರೆಲ್ಲರೂ ಗಾಬರಿಯಾಗಿ ಅಲ್ಲಿಗೆ ಓಡಿದ್ರಂತೆ. ಆದರೆ ಅಲ್ಲೇನೇನೂ ಆಗಿರಲಿಲ್ಲವಂತೆ! ಮಾತ್ರ, ಹಿಂದಿನ ವಾರದಿಂದಷ್ಟೇ ಅಡಿಗೆ ಮನೆಯಲ್ಲಿಟ್ಟಿದ್ದ ಅವನ ಹೆಂಡತಿ ಆಡ್ರಿಯ ದಿವಂಗತ ಚಿಕ್ಕಮ್ಮನ ಬಳುವಳಿಯಾಗಿ ಅವಳ ಚಿಕ್ಕಪ್ಪ ನೀಡಿದ್ದ ದೊಡ್ಡ antique spice rackನ ಗಾಜಿನ ಬಾಗಿಲು ತಂತಾನೇ ಸೀಳಿ ಚೂರುಚೂರಾಗಿ ಒಡೆದು ಬಿದ್ದಿತ್ತಂತೆ!

ಮೂರು ವರ್ಷಗಳ ಹಿಂದೆ ಆಡ್ರೀ ತೀರಿಕೊಂಡ ಅನಂತರ ಸರಿಯಾಗಿ ಹದಿನೈದನೇ ದಿನದಿಂದ ಪ್ರಾರಂಭವಾದ ಅವಳ ಪ್ರತೀ ರಾತ್ರಿಯ ಭೇಟಿಯಂತೂ ಒಂದು ಇರುಳೂ ತಪ್ಪದೇ ಒಂದು ವರ್ಷದ ಪರ್ಯಂತ ನಡೆಯಿತಂತೆ! ಇವತ್ತಿಗೂ ಸೀಮಿತವಾಗಿ ನಡೆಯುವ ಆ ವಿದ್ಯಮಾನವನ್ನು ಕೇವಲ ಅಡಿಗೆಮನೆ ಮತ್ತು ಅವಳ ಕೋಣೆಯಲ್ಲಿ ಓಡಾಡುವುದಕ್ಕೆ ಆಕೆ ಮಿತಿಗೊಳಿಸಿರುವುದು. ಇವನೇ ಒಂದು ದಿನ ಅವಳಿಗೆ ಗದರಿಸಿ ಹೇಳಿದ ಮೇಲಂತೆ!! ಅಲ್ಲಿಯವರೆಗೂ ಪ್ರತಿ ರಾತ್ರಿ ತಮ್ಮ ಮಂಚದ ಮೇಲೆ ತನ್ನ ಪಕ್ಕದಲ್ಲೇ ಮಲಗೀ, ಕುಳಿತೂ ಮಾಡುತ್ತಿದ್ದದ್ದನ್ನಂತೂ ವಿವರಿಸಲು ಅಸಾಧ್ಯವಂತೆ! ಸಾಲದ್ದಕ್ಕೆ ಅವಳಿದ್ದಷ್ಟು ಹೊತ್ತೂ ಕೊರೆಯುವ ಮಂಜಿನ ಥಂಡೀಗಾಳಿ ಬೀಸಿದ್ಹಾಗಾಗೋದು, ಅವರ ಮಂಚದ ಮೇಲೆ ಅವಳು ಕುಳಿತಾಗ ಅದು ಕಿರುಗುಟ್ಟಿ ಮ್ಯಾಟ್ರೆಸ್ ಮೇಲೆ ಹಳ್ಳ ಮಾಡೋದು, ಅವಳು ದಿಂಬಿನ ಮೇಲೆ ಹಿಂದಕ್ಕೆ ಒರಗುವಾಗ – ಮಲಗುವಾಗ ಸದ್ದಾಗೋದು, ಹೊದ್ದಿಕೆ ಮುದುರೋದು, ಕೊನೆಗೆ ಆ ದಿನ ರೇಗಿ – 'ಯಾಕೆ ಹೀಗೆ ನಂಗೆ ಹಿಂಸೆ ಮಾಡ್ತೀಯಾ ನಿದ್ದೆ ಮಾಡಕ್ಕೆ ಬಿಡದೆ' ಅಂತ ಒರಟಾಗಿ ಅವಳ ಕೈ ಹಿಡಿದು ಸಿಡುಕಿದಾಗ, ಮಂಜುಗಡ್ಡೆಯ ಕಟ್ಟಿಗೆಯಂತಿದ್ದ ಅವಳ ತೋಳು ಅವನ ಹಿಡಿತಕ್ಕೆ ಸಿಕ್ಕಿದ್ದು – ಇದೆಲ್ಲದರ ಸವಿವರ ಮಾಹಿತಿ ಅವನ ರೋಚಕ ಶೈಲಿಯಲ್ಲಿ!

ಇದು ಯಾವುದೂ ಖಂಡಿತಾ ಕನಸಲ್ಲ, ಏಕೆಂದರೆ ತಾನು ಮೊದಲಿಂದಲೂ ಅತೀ ಕಡಿಮೆ ನಿದ್ದೆ ಮಾಡುವ ಸ್ವಭಾವದವನಾದ್ದರಿಂದ, ರಾತ್ರಿ ಬಹಳ ಹೊತ್ತು ಓದುವ ಅಥವಾ ಟೀವಿ ನೋಡುವ ಅಭ್ಯಾಸ ತನ್ನದು ಎಂಬ ಅತ್ಯಂತ ಪ್ರಾಮಾಣಿಕವಾದ ಹೇಳಿಕೆಯ ಒಗ್ಗರಣೆ ಬೇರೆ! ಅದೇನೋ ಸರಿ.. ಯಾಕೇಂದ್ರೆ, ನಾವು ಯಾವಾಗಲಾದರೂ ರಾತ್ರಿ ತಡವಾಗಿ ಮನೆಗೆ ಬಂದಾಗ ಅಥವಾ ಮುಂಜಾನೆ ಎಂದಾದರೂ ಮೂರೂವರೆ ನಾಲ್ಕು ಘಂಟೆಗೆ ಎಚ್ಚರಗೊಂಡ ದಿನಗಳಲ್ಲೆಲ್ಲಾ ಇವರ ಮನೆಯಲ್ಲಿ ಉರಿಯುತ್ತಿರುವ ದೀಪ ಮತ್ತು ಅದರ ಬೆಳಕಿನಲ್ಲಿ ಆಗೊಮ್ಮೆ ಈಗೊಮ್ಮೆ ಕಾಣುವ ಅವನ ನೆರಳೇ ಸಾಕ್ಷಿ – ನಾವೇ ಕಂಡಹಾಗೆ!

ಒಟ್ಟಿನಲ್ಲಿ, ಅವನ ರಂಜನೀಯ ವಿವರಣೆಯ ಪ್ರಕಾರ ಅವನ ಮನೆಯ ಈ ವಿಶೇಷ ಅತಿಥಿಗಳು ರಾತ್ರಿ ಇವನು ಮಲಗಲೂ ಕಾಯುವುದಿಲ್ಲವಂತೆ! ಎಂಥಾ ಪೀಸ್ ಫುಲ್ ಕೋ ಎಕ್ಸಿಸ್ಟೆನ್ಸ್ ನೋಡಿ!

ಆದರೂ ತೀರಾ, ಈ ವೃತ್ತಾಂತಗಳನ್ನೆಲ್ಲಾ ನಂಬಬೇಕೂಂದ್ರೆ ಯಾಕೋ...

ಇತ್ತ ಕಡೆ ಕ್ಯಾಸ್ ಚೇತರಿಸಿಕೊಂಡು ಮತ್ತೆ ಮಾತಿನ ಎಳೆಯನ್ನು ಮುಂದುವರೆಸಿದ – ''ಅಷ್ಟ್ಯಾಕೆ ವೆನಿ, ನೀನವತ್ತು ಇವರ ಮನೆಯ ಅಟ್ಟದಲ್ಲಿ ಹಕ್ಕಿಗೂಡು ಕಟ್ಟಿದ್ದ ವಿಷಯ ಹೇಳಿದೆ ನೋಡು. ನೀನು ಅಷ್ಟೊಂದು ಅಪ್ಸೆಟ್ಟಾದರೂ ಸಹಾ ನಾವಿಬ್ಬರೂ ಅದನ್ನೆಲ್ಲ ಕ್ಲೀನ್ ಮಾಡಿದೆವಾ? ಆಮೇಲೆ ಮಾರನೆ ದಿನ ಆ ಏಸೀ ವೆಂಟಿಗೆ ಮೆಶ್ ವೆಲ್ಡ್ ಮಾಡೋಣಾಂತ ಉದ್ದನೆಯ ವಯರನ್ನು ಮನೆಯೊಳಗಿಂದಾ ಎಳೆದ್ವಿ. ಏಣಿ ಹತ್ತಿ ಇನ್ನೇನು ಆ ಕಿಂಡಿಯ ಹತ್ತಿರ ನಮ್ಮ ಕೆಲಸ ಶುರುಮಾಡಬೇಕೂಂತ ಹೊರಟಾಗೆಲ್ಲಾ ಪ್ಲಗ್ ಎಳೆದು ಡಿಸ್ಕನೆಕ್ಟ್ ಆಗ್ತಿತ್ತು. ಎಷ್ಟು ಸಲಾ ನಾವು ಏಣಿ ಹತ್ತೀ ಇಳಿದೂ ಪ್ಲಗ್ನ ರೀ ಕನೆಕ್ಟ್ ಮಾಡಿದ್ರೂ ಅಷ್ಟೇ! ಕೊನೆಗೆ ಅದು ಆಡ್ರೀದೇ ಕೆಲಸ ಇರಬೇಕೂಂತ ಹೊಳೀತು ಹ್ಯಾರಲ್ಡಿಗೆ. ಆಮೇಲೆ, ನಾನು ಅಲ್ಲೇ ಕೆಳಗೆ ನಿಂತು ಪ್ಲಗ್ಗನ್ನ ಗೋಡೆಗೆ ಒತ್ತಿ ಹಿಡ್ಕೊಂಡು ನಿಂತಿದ್ರಿಂದ ಕೆಲಸ ಮುಗೀತು, ಗೊತ್ತಾ!''

''ಒಳ್ಳೇ ಚೆನ್ನಾಯ್ತು, ನಿಮ್ಮ ವಯರಿನ ಉದ್ದ ಸಾಕಾಗಿರಲಾರದು ಅಷ್ಟೇ. ಸುಮ್ಮನೆ ಅಷ್ಟಕ್ಕೋಸ್ಕರ ನೀವು ಆಡ್ರಿಯವರೆಗೂ ಯೋಚಿಸೋದೇ ತಪ್ಪು'' – ಅಂತ ನಾನಂದೆ.

ಹ್ಯಾರಲ್ಡ್ ಬಾಯಿಹಾಕಿ – ''ಅದು ಹಾಗಲ್ಲ ವೆನಿ.. ಹಿಂದೊಂದು ಸಲ ಹೀಗೇ ಆಗಿ ನಮ್ಮ atticನಲ್ಲಿ ಹಕ್ಕಿಗೂಡು ಕಟ್ಟಿ ಮರಿ ಮಾಡಿ ರಂಪ ಆದಾಗಲೂ ನಾನು ಕ್ಲೀನ್ ಮಾಡಕ್ಕೆ ಹೊರಟಾಗ ಆಡ್ರಿಯ ಗಲಾಟೆ ನೋಡಬೇಕಿತ್ತು ನೀನು! ಆ ಹಕ್ಕಿಗಳ ಅಬ್ಬರಕ್ಕಿಂತಾ, ಅವಳನ್ನು ತಡೆಯೋಷ್ಟರಲ್ಲಿ ನಂಗೆ ಸಾಕುಸಾಕಾಗಿ ಹೋಗಿತ್ತು ಗೊತ್ತಾ?'' – ಅಂತಂದ...

''ಸರಿ ನಿಮ್ಮ ಮಾತನ್ನೇ ಒಪ್ಪೋಣ. ಆದರೆ ಈ ಪ್ರತಿದಿನದ ಸಮಸ್ಯೆಗಳಿಗೆಲ್ಲಾ ಏನು ಪರಿಹಾರಾಂತ ನಿನ್ನ ಅಭಿಪ್ರಾಯ? ನೀನು ನಿಮ್ಮ ಚರ್ಚಿಗೆ ಹೋಗಲ್ವೆ? ಅದರಿಂದ ಏನಾದ್ರೂ ಪ್ರಯೋಜನ...'' – ಅಂತ ಕೊನೆಗೆ ಸಿಂಪಥಿಸಿದೆ.

''ಹೋಗಿದ್ದೆನಲ್ಲ ಒಂದಿನ! ಅದೇ..., ನನ್ನ ಮದುವೆ ಆದಾಗ! ಆದ್ರೆ ಅದ್ಯಾಕೀಗ ನಿಂಗೆ, ಅದೂ ಈ ವಿಷಯ ಮಾತಾಡೂವಾಗ ಅಂತ ಕೇಳಬಹುದೇ?'' – ಅಂತ ನಗುತ್ತಾ ನಂಗೇ ಮರುಪ್ರಶ್ನೆ ಹಾಕಿದ. ಇವನಿಗೆ ಏನು ಹೇಳಬೇಕೂಂತ ನಂಗೆ ತೋಚಲಿಲ್ಲ.

ನಮ್ಮ ಗಾಳಿ ಆಂಜನೇಯಸ್ವಾಮಿ, ಸರ್ಕಲ್ ಮಾರಮ್ಮ – ತಮ್ಮ ಅಷ್ಟದಿಗ್ಬಂಧನದೆದುರು ಇಂಥಾ ಚಿಲ್ಲರೆ ಉಪದ್ರವಗಳೆಲ್ಲಾ ಯಾವ ಲೆಕ್ಕ – ಎಂದು ಸೆಡ್ಡು ಹೊಡೆಯುವ ನಮ್ಮ ಮಂತ್ರವಾದಿಗಳು, ಅವರ ತಾಯತಗಳು, ಭಂಡಾರಗಳು, ತೀರ್ಥಗಳು, ಕುಂಕುಮ – ನಿಂಬೇಹಣ್ಣು ಇತ್ಯಾದಿ ಇತ್ಯಾದಿಗಳೆಲ್ಲರೂ/ಎಲ್ಲವೂ, ಬೇಡ್ಬೇಡ ಅಂದ್ರೂ ಸಾಲಾಗಿ ನೆನಪಾದವು.

ಕೊನೆಗೆ, ಇಷ್ಟೆಲ್ಲಾ ಸೆನ್ಸೇಷನ್ ಕ್ರಿಯೇಟ್ ಮಾಡಿದ ಮಹರಾಯ, ಈ ಜ್ವಲಂತ ಪ್ರಶ್ನೆಗೆ – ಕಾಸು ಖರ್ಚಿಲ್ಲದೆ ತೀರಾ ಇತ್ತೀಚೆಗೆ ತಾನೇ ಕಂಡುಕೊಂಡಿರುವ ಸುಲಭೋಪಾಯಾನೂ ಅಷ್ಟೇ ಸಿಂಪಲ್ಲಾಗ್ಗಿ ಹೇಳೇಬಿಟ್ಟ! ಏನದು ಗೊತ್ತೇ?

ತನ್ನ ಎರಡೂ ಕಿವಿಗಳಿಗೆ ಸಿಕ್ಕಿಸಿಕೊಂಡಿರುವ ಹಿಯರಿಂಗ್ ಏಯ್ಡನ್ನು ರಾತ್ರಿ ಎಂಟಕ್ಕೆಲ್ಲಾ ತೆಗೆದಿರಿಸಿ, ಟೀವಿ ಸರಿಯಾಗಿ ಕೇಳಿಸಲು ತಂದಿಟ್ಟುಕೊಂಡಿರುವ ಹೆಡ್‌ಫೋನನ್ನು ಹಾಕ್ಕೊಳ್ಳೋದು. ನಿದ್ದೆ ಬರುವವರೆಗೂ ಹಾಯಾಗಿ ಟೀವಿ ನೋಡಿ, ನಂತರ ಅದನ್ನೂ ತೆಗೆದಿಟ್ಟಿಟ್ಟು, ಬೆಚ್ಚಗೆ ಹೊದ್ದುಕೊಂಡು, ಬಲವಾಗಿ ಮುಸುಕು ಹಾಕ್ಕೊಂಡು, ಮಲಗೋದು!

''ಶಬ್ದ ಕೇಳಿಸಿಕೊಂಡು ನಾನೂ ಎದ್ದು ಓಡಾಡಿದ್ರೆ ತಾನೇ ಕಷ್ಟ! ಅಲ್ಲದೆ, ಯಾರು ಎಷ್ಟು ಹುಯಿಲೆಬ್ಬಿಸಿದರೆ ತಾನೇ ನನಗೇನು? ಆಡ್ರೀನೂ ಪಾಪ ಈಗೀಗ ಅವಳ ರೂಮಲ್ಲಿ ಮಾತ್ರ ಇರ್ತಾಳೆ. ಒಮ್ಮೊಮ್ಮೆ ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿರುವ ಗಾಜು, ಪಿಂಗಾಣಿಚೂರುಗಳನ್ನ ಬೆಳಗಾಗೆದ್ದು ಹೆಕ್ಕಿದರಾಯ್ತು, ಮಕ್ಕಳಿಲ್ಲ ಮರಿಯಿಲ್ಲ ತುಳೀಬಹುದೇನೋನ್ನಕ್ಕೆ. ಗುಡ್ ಐಡಿಯಾ ಅಲ್ವಾ? ಏನಂತೀ?'' - ಅಂತಂದ.

ಈತನ ಈ ಮಟ್ಟದ ದಿವ್ಯ ನಿರ್ಲಕ್ಷ್ಯಕ್ಕೆ - ನಾನು ಏನು ತಾನೇ ಅನ್ನಲಿ ಸಧ್ಯ!

✵

---

## ಇನ್‌ಫ್ಲೇಷನ್

'ಹಣದುಬ್ಬರ ಎಂದರೆ ಏನು?' ಎಂದು ತನ್ನ ಶೇ.74ರಷ್ಟು ತಲೆ ಬೋಳಾಗಿದ್ದ ಗಂಡನನ್ನು ಹೆಂಡತಿ ಕೇಳಿದಳು.

'ಈಗ ನೋಡು ತನ್ನ ತಲೆ ತುಂಬಾ ಕೂದಲಿದ್ದಾಗ..'

'ಇತ್ತೇನು?'

'ಮದುವೆಯಾದ ಹೊಸತರಲ್ಲಿ ಇರಲಿಲ್ಲವೆ?'

'ಹೌದು ಹೌದು..'

'ಆಗ ನಾನು ಹೇರ್ ಕಟ್‌ಗೆ ಐದು ರೂಪಾಯಿ ಕೊಡ್ತಾ ಇದ್ದೆ? ಹತ್ತು ವರ್ಷ ಆದ ಮೇಲೆ ಶೇ.30ರಷ್ಟು ಬೋಳಾಗಿದ್ದ ತಲೆಗೆ ಹಜಾಮತೀಗೆ ಎಷ್ಟು ಕೊಡ್ತಾ ಇದ್ದೆ?'

'ಹದಿನೈದು ರೂಪಾಯಿ.'

'ಶೇ.50ರಷ್ಟು ಬೋಳಾಗಿದ್ದಾಗ?'

'30 ರೂಪಾಯಿ'

'ಕರೆಕ್ಟ್. ಈಗ?'

'40 ರೂಪಾಯಿ.'

'ಹಣದುಬ್ಬರ ಅಂದರೆ ಅದೇ ತಿಳೀತಾ?'

'ತಿಳೀತು. ಕೂದಲು ಕಡಿಮೆ ಆಗ್ತಾ ಇದ್ದಂತೆ ಅದನ್ನು ಬೋಳಿಸೋದಕ್ಕೆ ಹೆಚ್ಚು ಹಣ ಕೊಡೋದನ್ನೇ ಹಣದುಬ್ಬರ ಅಂತಾರೆ

– ಕುಬ್ಜ

# ಬೆಂಕೀ ದೇವ್ರ ಮುಂದ್ ಆಣೆ!?

**- ಎಚ್.ಬಿ. ಮಂಜುನಾಥ**

- ಲೇ ಚಂಬಸ್ಯಾ... ಇದು ಅಗಲಾ? ರಾತ್ರ್ಯಾ?

– ಅಲ್ಲಲೇ ತಿಪ್ಪಾ... ನೆತ್ತಿ ಮ್ಯಾಗೆ ಸೂರ್ಯ ಸುಡಾಕತ್ತೇತಿ, ಇದು ಅಗಲಾ? ರಾತ್ರ್ಯಾ? ಅಂತಾ ಕೇಳ್ತೀಯಲಲೇ!

- ಇಲ್ನೋಡಲೇ ಚಂಬಿ ನನ್ ಕೈಯಾ, ಎಸ್ಟು ಬೆಳ್ಳು ತೋರ್ಸಾಕತ್ತೀನಿ?

– ಮೂರಲೇ ತಿಪ್ಪಾ, ಮೂರು ಬೆಳ್ಳು, ಯಾಕಲೇ, ತಲೀಗಿಲೀ ಕೆಟ್ಟೇತಾ? ಏನೇನೋ ಕೇಳಾಕತ್ತೀಯಲ್ಲಾ!

- ನಂತಲೀ ಕೆಟ್ಟಿಲ್ಲಲೇ ಚಂಬಸ್ಯಾ, ನಿಂತಲೀ ಸರೀ ಐತಾ ನೋಡಾಕತ್ತೀನಿ.

– ನಂಗೇನಾಗೀತಲೇ ತಿಪ್ಪಾ, ಸರ್‌ಯಾಗೇ ಅದೀನಲಾ, ಯಾಕ್ ಏನಾತು?

- ಅಲ್ಲೋ ಚಂಬಿ ಭತ್ತದ್ ವ್ಯಾಪಾರ್ ಕಂತಾ ಮುರುಗೇಶಿ ಅತ್ರಾ ಲಕ್ಸ್ ರೂಪಾಯ ಸಾಲ ತಂಗಡಿದ್ಯಲ್ಲ, ನಾನೇ ನೋಡೀನಿ,

– ಊಂ, ತಗಂಡಿದ್ನಲೇ ತಿಪ್ಪಾ, ಇನ್ನೂ ತೀರ್ಸಿಲ್ಲ, ಬಡ್ಡೀ ಟಂಕಾಸೇರಿ ಯಾಲ್ಡ್ ಲಕ್ಸ ಆಗೇತಿ ಅಂತುದಾನೆ ಮುರುಗೇಶಿ!

- ಔದಲೇ ಚಂಬೀ... ಈಗೇನೋ ಏಳಾಕತ್ತೀಯಂತೆ , ''ಅವ್ನು ಕೊಟ್ಟೇ ಇಲ್ಲ, ನಾನ್ ತಗಂಡೇ ಇಲ್ಲ, ಬೇಕಾದ್ರೆ ಯಾವ್ ದೇವ್ರು ಮುಂದೂ ಆಣಿ ಮಾಡಾಕೆ ರೆಡೀ'' ಅಂತಾ!

– ಯಾವ್ ದೇವ್ರೇನಲೇ ತಿಪ್ಪಾ, ಆ ಬೆಂಕೀ ದೇವ್ರ್ ಮುಂದೂ ಆಣೀ ಮಾಡಾಕೆ ರೆಡೀ ಅದೀನಿ..

- ಅದ್ಕೇ ಕಣಲೇ ಚಂಬಸ್ಯಾ ನಿಂತಲೀ ನೆಟ್‌ಗೈತಾ ಕೆಟ್ಟೇತಾ ಅಂತಾ ನಾ ಪರೀಕ್ಸಿ ಮಾಡಿದ್ದು, ಅಲ್ಲಲೇ ತಗೊಂಡಿದ್ದೇ ಸೈ ಅಂದ್ಮೇಲೆ ತೀರ್ಸಾಕ್ ಯಾಕಲೇ ರಾಗ್ನಿ, ತಗೊಂಡಿಲ್ಲಾ ಅಂತಾ ಆಣೀ ಬೇರೆ ಮಾಡ್ತೀಯನಲೇ ಅದೂ ಆ ಬೆಂಕೀ ದೇವ್ರು ಮುಂದೇ!

– ಔದಲೇ ತಿಪ್ಪಾ, ನಿನ್ ಮುಂದಸ್ಟೇ ಏನು ಊರ್ ಮಂದೀಗೆಲ್ಲಾ ಏಳೀನಿ, ''ನಾನ್ ಇಸ್ಕಂಡೇ ಇಲ್ಲಾ, ಬೇಕಾರೆ ಎಲ್ಲಾದ್ರೂ ಆಣೀ ಮಾಡ್ತೀನಿ'' ಅಂತಾ...

- ಅಲ್ಲೋ ಚಂಬಿ ನಿಮ್ಮಪ್ಪೇನೋ ಏಳ್ತಿತ್ತಂತೆ, ''ದೇವ್ರು ಮುಂದೆ ಆಣೀ ಗೀಣೀ ಬ್ಯಾಡಾ'' ಅಂತಾ....

– ಊಂಕಣಲೇ ತಿಪ್ಪಾ, ಅಂಗೇಳು ಅಂತಾ ನಮ್ಮಪ್ಪುಂಗೆ ನಾನೇ ಏಳಿದ್ದೆ,

- ಅದ್ಯಾಕಲೆ ಚಂಬಿ ಅಂಗೆ!?..

– ಯಾಕಂದ್ರೆ ತಿಪ್ಪಾ ನಮ್ಮಪ್ಪ ಆಣಿಬ್ಯಾಡಾ ಅಂದಂಗ್ ಆಗ್ಬೇಕು, ನಾನು ಆದ್ರೂ ಮಾಡೇ ಮಾಡ್ತೀನಿ ಅಂತಾ ಓದಂಗ್ ಮಾಡ್ಬೇಕು, ಅವಾಗ ಮಂದೀ ಅಪ್ಪನ್ ಮಾತೂ ಮೀರಿ ಆಣಿ ಮಾಡಾಕೆ ಒಂಟಾನೆ ಅಂದ್ರೆ ಚಂಬಸ್ಯಾ ಕರೆಟ್ಟಾಗೇ ಅದಾನೆ ಅಂತ ತಿಳೀತಾರೆ...

- ಥೂ... ಭಂಡ್ಗೆಟ್ಟೋನೇ... ಅಂತೂ ಆ ಬೆಂಕೀ ದೇವ್ರ್ ಮುಂದೆ ಆಣೀ ಮಾಡಾದೇ ಖಾಯಂಬು ಅಂತಾತು?

– ಇಲ್ಲಲೇ ತಿಪ್ಪಾ, ದೇವ್ರೀಗೂ ಓಗಲ್ಲ, ಆಣೀನೂ ಮಾಡಲ್ಲ...

- ಅಲಾ ಚಂಬಸ್ಯಾ... ನಿನ್ ಮನೀ ಆಳಾಗಾ... ದೇವ್ರೀಗ್ ಓಗಾದೇ ಸೈ, ಆಣೀ ಮಾಡಾದೇ ಸೈಯಿ ಅಂತಾನೂ ಏಳ್ರೀ! ಓಗಾದೂ ಸುಳ್ಳು, ಆಣೀ ಮಾಡಾದೂ ಸುಳ್ಳು ಅಂತಾನೂ ಏಳ್ತೀ!! ಏನಾಗೇತಲೇ ನಿನ್ ತಲೀಗೆ?

– ಯಾರ್ಗೂ ಏಳ್‌ಬ್ಯಾಡಲೇ ತಿಪ್ಪಾ... ಏನ್ ಗೊತ್ತಾ... ನಮ್ ಸ್ವಾಮೇರ್ ಅದಾರಲಾ ಅವ್ರಿಗೆ ಅಡ್‌ಬಿದ್ದು ಯಲ್ಲಾ ಏಳ್ ಬಂದೀನಿ, ಸ್ವಾಮೇರು ಮುರ್‌ಗೇಶೀನ್ ಕರ್‍ಸಿ ''ಆಣೀ ಬಾಷೀ ಬ್ಯಾಡ್ರಲೇ, ಇಬ್ರೂ ಕುಂತು ನಿಮ್ ನಿಮ್ಮಾಗೇ ಬಗೀ ಅರಿಸ್ಕಳ್ರೀ, ಚಂಬಸ್ಯಾ ಲಾಸ್ ಆಗ್ಯಾನೆ, ಬಡ್ಡೀ ಬಂಕಾವಜಾಮಾಡಿ ಬರೀ ಅಸಲಾಗೆ ಎಂಟಣೀವಸ್ಟೋ, ಅನ್ನೆಲ್ಡಣೀವಸ್ಟೋ ಇಸ್ಕಂಡು ಬಗೀ ಅರಿಸ್ಕೋ'' ಅಂತಾ... ಅಂಗೇ ಆಗ್ತೇತಿ ನೋಡು.

✵

---

## ಮುನ್ನೆಚ್ಚರಿಕೆ

**ಕಾಡೊಂದರಲ್ಲಿ ಹೆಣ್ಣು ಮತ್ತು ಗಂಡು ಸಿಂಹ ಸರಸ ಸಲ್ಲಾಪದಲ್ಲಿ ತೊಡಗಿದ್ದವು. ಸ್ವಲ್ಪ ಸಮಯದ ನಂತರ ಹೆಣ್ಣು ಸಿಂಹ ಗಂಡಿನಿಂದ ಬಿಡಿಸಿಕೊಂಡು ಹೋಗಿ ಸುತ್ತಮುತ್ತಲು ನೋಡಿ ಬಂದಿತು.**

**'ಯಾಕೆ ಡಿಯರ್?' ಎಂದು ಗಂಡು ಸಿಂಹ ಕೇಳಿತು.**

**'ಏನಿಲ್ಲ. ಡಿಸ್ಕವರಿ, ನ್ಯಾಷನಲ್ ಜಿಯಾಗ್ರಫಿ ಚಾನಲ್‌ನವರು ಇಲ್ಲೆಲ್ಲಾದರೂ ಅಡಗಿ ನಮ್ಮ ಸರಸ ಸಲ್ಲಾಪ ಶೂಟ್ ಮಾಡ್ತಾ ಇದ್ದಾರೇನೋ ಅಂತ ಚೆಕ್ ಮಾಡ್ದೆ ಅಷ್ಟೆ' ಎಂದಿತು ಹೆಣ್ಣು ಸಿಂಹ.**

**'ಥ್ಯಾಂಕ್ಸ್ ಡಿಯರ್' ಎಂದ ಗಂಡು ಸಿಂಹ ಈಗ ನಿರಾತಂಕವಾಗಿ ಸರಸ ಸಲ್ಲಾಪ ಮುಂದುವರೆಸಿತು.**